BUDGET FOR 1962-63—VOTING OF DEMANDS FOR GRANTS.

Demand No. 17—28. Education.

(Debate continued.)

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ (ಸಾಗರ).—ಮಾನ್ಯ ಸಭಾಧ್ಯಕ್ಷರೇ, ನಿನ್ನೆಯ ದಿವಸ ನಾನು ಮಾತನಾಡುತ್ತಾ ಕೆಲವು ಕಾಲೇಜುಗಳಲ್ಲಿ ಇರತಕ್ಕಂತಹ ಸನ್ನಿವೇಶವನ್ನು ವಿವರಿಸಿದೆ; ಹಾಗೂ ಅಲ್ಲಿ ಅಸಮರ್ಪಕವಾದ ಸಿಬ್ಬಂದಿಯಿಂದಾಗಿ ಅಲ್ಲಿಯ ವಿದ್ಯಾರ್ಥಿಗಳಿಗೆ ಸರಿಯಾದ ನಂಬರುಗಳನ್ನು ತೆಗೆಯುವುದಕ್ಕೆ ಅವಕಾಶವಿಲ್ಲದೆ ಪರೀಕ್ಷೆಯಲ್ಲಿ ಕಡಮೆ ನಂಬರುಗಳನ್ನು ತೆಗೆದು, ವೃತ್ತಿಶಿಕ್ಷಣದ ಕೋರ್ಸುಗಳಿಗೆ ಪ್ರವೇಶವನ್ನು ದೊರಕಿಸಿಕೊಳ್ಳಲು, ಕಾಲೇಜುಗಳಿಗೆ ಹೋಗಲು ಈಗಿರುವ ಪದ್ಧತಿಯಿಂದ ತೊಂದರೆಯಾಗುತ್ತಿದೆ; ಇವಕ್ಕಾಗಿ ಜಿಲ್ಲಾವಾರು ಪ್ರಾತಿನಿಧ್ಯ ಕೊಡತಕ್ಕದ್ದು ನ್ಯಾಯವಾದುದು. ಜಿಲ್ಲಾವಾರು ಪ್ರಾತಿನಿಧ್ಯ ಎಂದರೆ, ಈಗ ಯಾವ ರೀತಿಯಲ್ಲಿ ಮೆರಿಟ್ ಮತ್ತು ಕಮ್ಯೂನಿಟಿಗಳನ್ನು ಪರಿಗಣಿಸುತ್ತಿದ್ದಾರೋ ಅದೇ ರೀತಿಯಲ್ಲಿ ಜಿಲ್ಲಾವಾರು ಪದ್ಧತಿಯಲ್ಲೂ ಅನುಸರಿಸಬೇಕು ಎಂದು ನಾನು ನಿನ್ನೆ ಕೇಳಿಕೊಂಡೆ.

ವಿದ್ಯಾ ಖಾತೆಯ ಬಡ್ಜೆಟ್ಟಿನ ವಿಚಾರವಾಗಿ ಹೇಳುತ್ತಾ ಟೆಕ್ಸ್ಟ್ ಬುಕ್ಕುಗಳನ್ನು ಗೊತ್ತುಪಡಿಸುವುದರಲ್ಲಿ ಸರಕಾರದವರ ನೀತಿ ಸಾರ್ವಜನಿಕರಿಗೆ ಬಹಳ ಅಸಮಾಧಾನವನ್ನುಂಟುಮಾಡಿದೆ. ಈ ಕೂಗು ಎಲ್ಲರಿಗೂ ಈಗ ಕೇಳಿಸಿದೆ. ಇಷ್ಟು ದಿವಸಗಳಾದರೂ ಸ್ಕೂಲುಗಳಲ್ಲಿ ಮಕ್ಕಳಿಗೆ ಪಠ್ಯಪುಸ್ತಕಗಳು ಸಿಕ್ಕದೆ ಬಹಳ ತೊಂದರೆಯಾಗಿದೆ. ಅಲ್ಲದೆ ಪಠ್ಯಪುಸ್ತಕಗಳು ಸಕಾಲದಲ್ಲಿ ಒದಗಲು ಪ್ರಿಂಟಿಂಗ್ ಪ್ರೆಸ್ಸಿನ ಅಭಾವ ನಮ್ಮ ಮುಂದೆ ಕಾಣುತ್ತಿದೆ. ಇದರ ಜೊತೆಯಲ್ಲಿ ಈಗ ಅನುಸರಿಸಿರತಕ್ಕಂತಹ ನೀತಿ ಏನೆಂದರೆ, ಟೆಕ್ಸ್ಟ್‌ಬುಕ್ಕುಗಳನ್ನು ಪ್ರತಿವರ್ಷವೂ ಬದಲಾಯಿಸುತ್ತಿರುತ್ತಾರೆ. ಇದನ್ನು ನಿವಾರಣೆ ಮಾಡಲು ಪ್ರಿಂಟಿಂಗ್ ಪ್ರೆಸ್ಸು ಆದರೆ, ಮುಂದೆ ಟೆಕ್ಸ್ಟ್‌ಬುಕ್ಕುಗಳ ವಿಚಾರದಲ್ಲಿ ತೊಂದರೆ ಬರುವುದಿಲ್ಲ. ಪ್ರತಿ ವರ್ಷವೂ ಟೆಕ್ಸ್ಟ್‌ಬುಕ್ಕುಗಳನ್ನು ಬದಲಾಯಿಸುವ ನೀತಿಯನ್ನು ನಿಲ್ಲಿಸಬೇಕು. ಖಾಯಂ ಆದ ಒಂದು ಕಮಿಟಿ ಇರುವಾಗ ಅಲ್ಲಿ ನಿರ್ದಿಷ್ಟವಾದ ಅವಧಿಯ ವರೆಗೆ ಟೆಕ್ಸ್ಟ್‌ಬುಕ್ಕುಗಳನ್ನು ಮುಂದುವರಿಸುವುದು ಬಹಳ ಮಹತ್ವದ್ದಾಗಿರುತ್ತದೆ.

ಕೊನೆಯದಾಗಿ, ನಾನು ಶಿವಮೊಗ್ಗ ಜಿಲ್ಲೆಯಿಂದ ಬಂದಿರುವುದರಿಂದ ಒಂದು ಮಾತನ್ನು ಹೇಳಬೇಕಾಗಿದೆ. ಶಿವಮೊಗ್ಗ ಜಿಲ್ಲೆಗೆ ಕೊಟ್ಟಂತಹ ಒಂದು ಮೆಡಿಕಲ್ ಸ್ಕೂಲನ್ನು ತೆಗೆದುಹಾಕಿರುವುದು ಸರಿಯಲ್ಲ ಎಂದು ಈ ಸನ್ನಿವೇಶದಲ್ಲಿ ಬಹಳ ವಿಷಾದದಿಂದ ತಮ್ಮ ಮುಂದೆ ಹೇಳಬೇಕಾಗಿದೆ. ಶಿವಮೊಗ್ಗ ಜಿಲ್ಲೆಯ ಎಲ್ಲಾ ವಿಚಾರಗಳನ್ನು ತಾವು ಮನಗಂಡಿದ್ದೀರಿ; ಎಂದರೆ ನಮ್ಮ ಜಿಲ್ಲೆಯಿಂದಲೇ ಹೆಚ್ಚಿನ ವರಮಾನ ಲ್ಯಾಂಡ್ ರೆವಿನ್ಯೂವಿನಿಂದ, ಆಹಾರ ಸರಬರಾಜಿನಿಂದ, ವಿದ್ಯುಚ್ಛಕ್ತಿ ಸರಬರಾಜಿನಿಂದ ಹಾಗೂ ಅರಣ್ಯಶಾಖೆಯಿಂದ ಬರುತ್ತಿದೆ. ಅಲ್ಲದೆ ಈ ಜಿಲ್ಲೆಯಿಂದಲೇ ಆಗುವ ಕಬ್ಬಿಣ, ಸಿಮೆಂಟು, ಪೇಪರು, ಇವುಗಳಿಂದ ವರಮಾನ ಪಡೆಯುತ್ತಿದ್ದಾರೆ. ಹೀಗಿದ್ದು ಮೆಡಿಕಲ್ ಸ್ಕೂಲನ್ನು ಇಲ್ಲಿ ಮುಚ್ಚಲಾಯಿತು. ಇಲ್ಲಿಯೇ ಮೆಡಿಕಲ್ ಕಾಲೇಜನ್ನು ಮಾಡಲು ಅನುಕೂಲಗಳಿವೆ. ಇಲ್ಲಿರತಕ್ಕ ವೈದ್ಯಕೀಯ ಸಿಬ್ಬಂದಿಯಿಂದಾಗಿ, ಶಿವಮೊಗ್ಗ ಜಿಲ್ಲೆಗೆ ಒಂದು ಮೆಡಿಕಲ್ ಕಾಲೇಜನ್ನು ಸರಕಾರದವರು ಕೊಡುವ ಮೂಲಕ ಈಗಾಗಿರತಕ್ಕ ಅನ್ಯಾಯಗಳನ್ನು ಪರಿಹಾರ ಮಾಡುವುದಕ್ಕೆ ಒಂದು ಅವಕಾಶವಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಈಗ ಇರತಕ್ಕ ವೈದ್ಯಕೀಯ ಸಿಬ್ಬಂದಿಯಲ್ಲಿ ಮೊದಲನೇ ದರ್ಜೆಯ ಮೆಡಿಕಲ್ ಅಧಿಕಾರಿಗಳು ನಾಲ್ಕು ಜನರಿದ್ದಾರೆ, ಎರಡನೇ ದರ್ಜೆಯ ಅಧಿಕಾರಿಗಳು ಐದು ಜನರಿದ್ದಾರೆ. ವೈರಸ್ ಡಯಾಗ್ನಿಸ್ಟಿಕ್ ಲ್ಯಾಬರೇಟರಿಯಲ್ಲಿ ಒಬ್ಬರು ಮಲೇರಿಯಾ ಎರಾಡಿಕೇಷನ್ ಸ್ಕೀಮಿನಲ್ಲಿ ಎರಡನೇ ದರ್ಜೆಯ ಅಧಿಕಾರಿಗಳು ಇದ್ದಾರೆ. ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರೆಂದೂ ಮೊದಲನೇ ದರ್ಜೆಯ ಅಧಿಕಾರಿಗಳಿದ್ದಾರೆ. ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಮತ್ತು ರೆಸಿಡೆಂಟ್ ಮೆಡಿಕಲ್ ಆಫೀಸರ್, ಹೀಗೆ ನಾಲ್ಕು ಜನರು ಮೊದಲನೇ ದರ್ಜೆಯ ಅಧಿಕಾರಿಗಳಿದ್ದಾರೆ. ಎರಡನೇ ದರ್ಜೆಯ ಅಧಿಕಾರಿಗಳೂ ಇದ್ದಾರೆ. ಹೀಗೆ ಒಂದು ಹೆಚ್ಚಿನ ವ್ಯವಸ್ಥೆಗಳೆಲ್ಲಾ ಆ ಜಿಲ್ಲೆಯಲ್ಲಿವೆ. ಆ ಒಂದು ಕಾರಣದಿಂದ ಸರ್ಕಾರದವರು ಅಲ್ಲಿ ಈ ಹಿಂದೆ ತೆರೆದಿದ್ದ ಮೆಡಿಕಲ್ ಸ್ಕೂಲಿಗೆ ಬದಲಾಗಿ ಅಲ್ಲಿ ಒಂದು ಮೆಡಿಕಲ್ ಕಾಲೇಜನ್ನು ತೆರೆಯಲು ಎಲ್ಲ ಅನುಕೂಲತೆಗಳೂ ಇವೆ. ನಾನಾಗಲೇ ಹೇಳಿದಂತೆ, ಅಲ್ಲಿರತಕ್ಕ ಅಧಿಕಾರಿಗಳನ್ನು ಈ ಮೆಡಿಕಲ್ ಕಾಲೇಜಿಗೆ ಅಡಿಷನಲ್ ಚಾರ್ಜ್‌ನಲ್ಲಿ ಉಪಯೋಗಿಸಿಕೊಂಡರೆ ಅತ್ತ ಅವರ ಕೆಲಸವೂ ನಡೆಯುತ್ತದೆ, ಇತ್ತ ಕಾಲೇಜೂ ಸಹ ಕೆಲಸ ಮಾಡಬಹುದು. ಹೀಗೆ ತಾವು ಈಗ ಮಣಿಪಾಲನಲ್ಲಿ ನಡೆಸುತ್ತಿರುವ ಕಾಲೇಜಿನ ಮಾದರಿಯಲ್ಲಿ ಮೂರು ವರ್ಷಗಳ ಕಂಡೆನ್ಸ್ಡ್ ಕೋರ್ಸನ್ನು ಇಲ್ಲಿಯೂ ನಡೆಸಬಹುದು. ಆಗ ಇದರಿಂದ ಸರ್ಕಾರಕ್ಕೂ ಸಹ ಅಷ್ಟೇನೂ ಹೆಚ್ಚಿಗೆ ಖರ್ಚು ಬರುವುದಿಲ್ಲ. ಇದಕ್ಕಾಗಿ ಒಂದು ಉದಾಹರಣೆಯನ್ನು ತೆಗೆದುಕೊಂಡರೆ ಅಲ್ಲಿ ಒಂದನೇ ತರಗತಿಯಲ್ಲಿ ನೂರು ಜನ ವಿದ್ಯಾರ್ಥಿಗಳಿದ್ದಾರೆಂದು ಇಟ್ಟುಕೊಂಡರೆ ಅಲ್ಲಿ IIIನೇ ತರಗತಿ ಹೊತ್ತಿಗೆ 40 ಹುಡುಗರು ಪಾಸಾಗಿ ಈಚೆಗೆ ಬರಬಹುದು. ಇವರನ್ನು ಬೇಕಾದರೆ ತಾವು ಹುಬ್ಬಳ್ಳಿ-ಮೈಸೂರು-ಬೆಂಗಳೂರುಗಳಲ್ಲಿರತಕ್ಕ ಕಾಲೇಜಿಗೆ ಹಂಚಿಕೆ ಹಾಕಿ ಸೇರಿಸಬಹುದು. ಇಂಥ ಒಂದು ಸದವಕಾಶ ಆ ಜಿಲ್ಲೆಯಲ್ಲಿದೆ. ಆದುದರಿಂದ ಸರ್ಕಾರದವರು ಬಹಳ ಸಹಾನುಭೂತಿಯಿಂದ ಈ ವಿಷಯಗಳನ್ನೆಲ್ಲ ಪರಿಶೀಲನೆ ಮಾಡಿ ಅಲ್ಲಿ ಮೆಡಿಕಲ್ ಸ್ಕೂಲಿನ ಜಾಗದಲ್ಲಿಯೇ ಮೆಡಿಕಲ್ ಕಾಲೇಜನ್ನು ತೆರೆಯಬೇಕೆಂದು ಸೂಚಿಸುತ್ತೇನೆ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಸಭಾಪತಿಗಳೇ, ದೇಶದಲ್ಲಿ ಎಲ್ಲಕ್ಕಿಂತಲೂ ಮಿಗಿಲಾದ ಜನ ಜೀವನದ ಜ್ಞಾನಜ್ಯೋತಿಯನ್ನು ಬೆಳಗುವಂತೆ ಮಾಡಲು ನಮ್ಮ ಮೈಸೂರು ಸರ್ಕಾರದವರು ವಿದ್ಯಾಭ್ಯಾಸದ ಖಾತೆಗೆ 1962-63ನೆಯ ಸಾಲಿಗೆ 18 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಬೇಕಾಗಿದೆ, ಅದಕ್ಕೆ ಈ ಸಭೆಯ ಸದಸ್ಯರು ಒಪ್ಪಿಗೆಯನ್ನು ಕೊಡಬೇಕೆಂದು ಹೇಳಿ ಈ ಒಂದು ಬೇಡಿಕೆಯನ್ನೀಗ ಈ ಮಾನ್ಯ ಸಭೆಯ ಮುಂದೆ ಇಟ್ಟಿದ್ದಾರೆ, ನಿಜ. ಆದರೆ ಈ ಹಣದಿಂದ ದೇಶದಲ್ಲಿರತಕ್ಕ ಹುಡುಗರನ್ನೆಲ್ಲ ವಿದ್ಯಾವಂತರನ್ನಾಗಿ, ನಾಗರಿಕರನ್ನಾಗಿ ಮಾಡಿ ದೇಶದ ಕೀರ್ತಿ, ಪ್ರತಿಭೆ ಮತ್ತು ಮಂಗಳವನ್ನುಂಟು ಮಾಡತಕ್ಕಂಥ ಪ್ರಜೆಗಳನ್ನು ತಯಾರು ಮಾಡುವ ಈ ವಿದ್ಯಾಖಾತೆಗೆ ನಾನೀ ದಿವಸ ಕೊಡತಕ್ಕ ಈ ಹಣ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಸದ್ವಿನಿಯೋಗವಾಗುತ್ತದೆಯೇ ಎಂಬುದನ್ನು ನಾವೆಲ್ಲರೂ ಈಗ ಸ್ವಲ್ಪ ಆಲೋಚನೆ ಮಾಡಿ ನೋಡಬೇಕಾಗಿದೆ. ಈ ದಿವಸ ಈ ವಿದ್ಯಾಖಾತೆಯಲ್ಲಿ ನಡೆಯತಕ್ಕ ವಿಚಾರಗಳೇನೆಂಬುದನ್ನು ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಈ ದಿವಸ ಈ ಇಲಾಖೆಗೆ ರಾಹುಗ್ರಸ್ಥವಾಗಿ ಇದಕ್ಕೆ ಎಷ್ಟು ಪುರಸ್ಕಾರ, ಶುಚಿ ಇತ್ಯಾದಿಗಳಿರಬೇಕಾಗಿದ್ದು ಅವುಗಳೊಂದೂ ಇಲ್ಲದೆ ಅದು ಬಹಳ ಸೂತಕದಿಂದ ಕೂಡಿದೆ. ನಾನೀಗ ಏತಕ್ಕಾಗಿ ಈ ಮಾತುಗಳನ್ನು ಹೇಳುತ್ತಿದ್ದೇನೆಂದರೆ ನಾನು ಈ ಹಿಂದೆ ಸಹ ಎಷ್ಟೋ ವೇಳೆ ಈ ಇಲಾಖೆಯಲ್ಲಿ ನಡೆಯುತ್ತಿರುವ ಅವಿವೇಕಗಳನ್ನು ಈ ಸಭೆಯ ಮುಂದಿಟ್ಟಾಗ್ಯೂ ಅವುಗಳನ್ನು ಸರ್ಕಾರದವರು ಬಹಳ ಲಘುವಾಗಿ ಕಂಡುದೊಂದೇ ಅಲ್ಲದೆ ಈ ಸಭೆಯಲ್ಲಿ ಸದಸ್ಯರುಗಳು ಹೇಳತಕ್ಕ ಹೇಳಿಕೆಗಳಿಗೆ-ಸದಸ್ಯರು ಕೊಡತಕ್ಕ ಸಲಹೆಗಳಿಗೆ ಪುರಸ್ಕಾರ ಕೊಡಲು ಸರ್ಕಾರದವರು ಎಷ್ಟು ದೂರ ಹೋಗಿದ್ದಾರೆಂದರೆ ಆ ಸಲಹೆಗಳನ್ನು ಕಡೆಗಾಣಿಸಿ ಅವರು ತಮ್ಮ ಮನೋಇಚ್ಛೆಯಂತೆ ಕೆಲಸಗಳನ್ನು ಮಾಡುತ್ತಿದ್ದಾರೆ. ಆದರೆ ಇಂದು ಮನಸ್ವೇಚ್ಛೆಯಾಗಿ ಕೆಲಸ ಮಾಡತಕ್ಕ ಸರ್ಕಾರ ಬಹಳ ದಿವಸ ಇರಲಾರದು. ಈ ದಿವಸ ವಿದ್ಯಾ ಇಲಾಖೆಯಲ್ಲಿರತಕ್ಕ ಲೋಪದೋಷಗಳನ್ನೆಲ್ಲಾ ದೂರ ಮಾಡಿ ದೇಶದಲ್ಲಿರತಕ್ಕ ಜನರನ್ನು ವಿದ್ಯಾವಂತರನ್ನಾಗಿ, ನಾಗರಿಕರನ್ನಾಗಿ ಮತ್ತು ಸತ್ಪ್ರಜೆಗಳನ್ನಾಗಿ ಮಾಡಲು ಯಾರು ಈದಿವಸ ಈವಿದ್ಯಾಖಾತೆಯ ಕುಲುಮೆಯನ್ನು ಹಿಡಿದಿದ್ದಾರೋ ಅವರು ಎಚ್ಚರಿಕೆಯಿಂದ ಕೆಲಸ ಮಾಡದಿದ್ದರೆ ಅವರು ದೇಶಕ್ಕೆ ಬಹಳ ಅನ್ಯಾಯವನ್ನು ಮಾಡಿದಂತಾಗುತ್ತದೆ. ಆದರೆ ಮೊನ್ನೆತಾನೆ ನಡೆದ ಸಾರ್ವತ್ರಿಕ ಚುನಾವಣೆಗಳಾದ ಮೇಲೆ ಅಂದರೆ 1962ನೆ ಚುನಾವಣೆಗಳಾದನಂತರ ಶ್ರೀಮಾನ್ ಕಂಠಿಯವರು ದೇಶದ ಮುಖ್ಯಮಂತ್ರಿಗಳಾಗಿ, ಅವರು ಹೊತ್ತಿದ್ದ ಹೊರೆಗಳ ಭಾರ ಬಹಳ ಜಾಸ್ತಿಯಾಗಿತ್ತು. ಅವರಿಗೆ ವಿದ್ಯಾಖಾತೆಯಿತ್ತು, ಹಣಕಾಸಿನ ಖಾತೆಯಿತ್ತು, ಪ್ಲಾನಿಂಗ್ ಅಂಡ್ ಡೆವಲಪ್‌ಮೆಂಟ್ ಖಾತೆಗಳು ಹೀಗೆ ಏನೇನೋ ಅವರ ಮೇಲೆ ಬಿದ್ದು ಅವರ 102 ದಿವಸಗಳ ಆಡಳಿತಾವಧಿಯಲ್ಲಿ ನಡೆದಂಥ ರಾಜ್ಯಭಾರಕ್ಕೆ ಆಗಲೇ ರಾಹುದೆಶೆ ಪ್ರಾರಂಭವಾಯಿತು. ಆದಕಾರಣ ಶ್ರೀಮಾನ್ ಕಂಠಿಯವರು ಈ ದಿವಸ ಆದಷ್ಟು ಕಣ್ಣುತೆರೆದು ಕೆಲಸ ಮಾಡಬೇಕಾಗಿದೆ. ಈ ದಿವಸ ಅವರೇನು ನಮ್ಮ ಒಪ್ಪಿಗೆ ಪಡೆಯಲು ನಮ್ಮ ಮುಂದೆ ಈ ಒಂದು ಬೇಡಿಕೆಯನ್ನಿಟ್ಟಿದ್ದಾರೋ ಇದರಲ್ಲಿ ಕಾಣತಕ್ಕ 18 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಾಗ ನಿಜವಾಗಿಯೂ ಈ ಹಣ ಹಳ್ಳಿಗಳಿಗೆ ತಲುಪಿ ಇದರಿಂದ ಜನಗಳಿಗೆ ಒಳ್ಳೆಯದಾಗುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ನಿಗಾದಲ್ಲಿಟ್ಟುಕೊಂಡು ತಮ್ಮ ಕೈಕೆಳಗಿರತಕ್ಕ ಅಧಿಕಾರಿಗಳೂ ಸಿಬ್ಬಂದಿವರ್ಗ ವಿತರಣೆಯಿಂದ-ವಿವೇಕದಿಂದ ವರ್ತಿಸುತ್ತಿದ್ದಾರೆಯೇ ಎಂಬುದನ್ನು ಗಣನೆಗೆ ತೆಗೆದುಕೊಳ್ಳದೆ ಹೋದರೆ ಇದೆಲ್ಲವೂ ಬರಿಯ ಬಾಯಿಮಾತುಗಳಾಗಿ-ಇದು ಕೇವಲ ಪುಸ್ತಕದೊಳಗಿನ ಬದನೆಕಾಯಿ ಆಗುತ್ತದೆ. ಆದರೆ ನಿಜವಾಗಿಯೂ ಇದರಿಂದ ಜನರಿಗೊಂದು ಒಳ್ಳೆಯದಾಗಬೇಕು, ನಮ್ಮ ಜನರು ವಿದ್ಯಾವಂತರಾಗಬೇಕು, ನಾಗರಿಕರಾಗಬೇಕು, ನಮ್ಮ ಪ್ರಜೆಗಳ ಕೀರ್ತಿ ದೇಶದಲ್ಲೆಲ್ಲಾ ಹೆಚ್ಚಾಗಬೇಕೆಂಬ ಆಶೆಆಕಾಂಕ್ಷೆಗಳಿಂದ ಅವರು ಶ್ರದ್ಧೆ ವಹಿಸಿ ಕೆಲಸ ಮಾಡಿದರಂತೂ ಸರಿ. ಇಲ್ಲದಿದ್ದರೆ ಇದೆಲ್ಲಾ ಮರಳುಕಾಡಿನ ಬಿಸಿಲ್ಗುದುರೆಯಂತಾಗುವುದು. ಈ ವಿದ್ಯಾಭ್ಯಾಸಕ್ಕೆ ನಮ್ಮ ಮಂತ್ರಿಗಳು ಒಂದು ತಮ್ಮದೇ ಆದ ಹೊಸ ಬುನಾದಿಯನ್ನು ಹಾಕಿ ಅದರ ಮೇಲೆ ಕೆಲಸ ಮಾಡಬೇಕಾಗಿದೆ. ಇಲ್ಲದಿದ್ದರೆ ಇದೆಲ್ಲವೂ ಒಂದು ಹಗಲುಗನಸಾಗುವುದು. ಮೊದಲು ಅವರು ಇದರಲ್ಲಿರತಕ್ಕ ಲೋಪದೋಷಗಳೇನೆಂಬುದನ್ನು ಕಂಡುಹಿಡಿಯಲು ಪ್ರಯತ್ನಿಸಬೇಕು. ಇದರಿಂದಲೇ ಅವರು ಈ ವಿದ್ಯಾಮಟ್ಟವನ್ನು ಯಾವ ಮಟ್ಟಕ್ಕೆ ಒಯ್ಯುತ್ತಾರೆಂಬುದು ಗೊತ್ತಾಗುತ್ತದೆ. ಈಗಾಗಲೇ ನಮ್ಮ ಸ್ನೇಹಿತರೊಬ್ಬರು ಹೇಳಿದರು—ಶ್ರೀಮಾನ್ ನಿಜಲಿಂಗಪ್ಪನವರಿಗೆ ಹಿತ್ತಾಳೆ ಕಿವಿ ಇದೆ ಎಂದು. ಆದರೆ ಅವರದು ಹಿತ್ತಾಳೆ ಕಿವಿಯಲ್ಲ. ನಮ್ಮ ವಿದ್ಯಾಮಂತ್ರಿಗಳ ಕಿವಿಗಳು ಹಿತ್ತಾಳೆ. ಆದರೆ ನಾನು ಅವರಿಗೆ ಮತ್ತೊಬ್ಬರು ಬಂದು ಹೇಳುವುದನ್ನು ಕೇಳಬೇಡಿ ಎಂದು ಹೇಳುವುದಿಲ್ಲ. ನಾನು ಹೋಗಿ ಹೇಳಿದರೂ ಕೇಳಲಿ, ಇನ್ನೊಬ್ಬರು ಬಂದು ಅವರೇನು ಹೇಳುತ್ತಾರೋ ಅದನ್ನೂ ಕೇಳಲಿ, ಅವರ ಅಧಿಕಾರಿಗಳು ಬಂದು ಅವರೇನು ಹೇಳುತ್ತಾರೋ, ಅದನ್ನೂ ಕೇಳಲಿ—ಹೀಗೆ ಯಾರೇ ಬಂದು ಏನೇ ಹೇಳಲಿ-ಕೇಳಿದ ಮೇಲೆ ಅವರು ತಮ್ಮ ಮನಸ್ಸಿನಲ್ಲಿ ಏನು ತೋಚುತ್ತದೋ ಅದರಂತೆ ಸ್ವಂತ ಆಲೋಚನೆ ಮಾಡಿ ಒಂದು ತೀರ್ಮಾನ ತೆಗೆದುಕೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ.

ಈ ದಿವಸ ಅನೇಕ ಕಡೆಗಳಲ್ಲಿ ಸ್ಕೂಲುಗಳಿದ್ದರೂ ಅಲ್ಲಿ ಉಪಾಧ್ಯಾಯರುಗಳಿಲ್ಲ-ಅನೇಕ ಕಡೆ ಸ್ಕೂಲು ಬಿಲ್ಡಿಂಗ್‌ಗಳೇ ಇಲ್ಲ. ಈ ವಿಚಾರ ಮಾನ್ಯ ಸಚಿವರಿಗೂ ಗೊತ್ತಿದೆ. ಏನು ಈ ಕಾಂಗ್ರೆಸ್ ಪಕ್ಷದವರು ರಾಜ್ಯವನ್ನು ರಾಮರಾಜ್ಯವನ್ನಾಗಿ ಮಾಡುತ್ತೇವೆಂದು ಹೇಳಿದರೋ ಅಂಥಾ ರಾಜ್ಯದಲ್ಲಿರತಕ್ಕ ಅಧಿಕಾರಿಗಳೊಬ್ಬರೂ ಈ ದಿವಸ ಹಳ್ಳಿಯವರ ವಿಚಾರವೆಂದರೆ ಮನಸಾರೆ ಕೆಲಸ ಮಾಡುತ್ತಿಲ್ಲವೆಂದು ಈ ಸಭೆಯಲ್ಲಿ ನಾವು ತಿಳಿಸಿದರೆ ಅದಕ್ಕೆ ಮಂತ್ರಿಗಳು ಮಾನ್ಯತೆ ಕೊಡಬೇಕು—ಗೌರವ ಕೊಡಬೇಕು. ಉದಾಹರಣೆಗೆ ಈ ದಿವಸ ವಿದ್ಯಾಖಾತೆಯಲ್ಲಿ ನಾಲ್ಕು ಜನ ಜಾಯಿಂಟ್ ಡೈರೆಕ್ಟರುಗಳನ್ನು ನೇಮಕ ಮಾಡಲಾಗಿದೆ. ಈ ಜನಗಳಿಗೆಲ್ಲ ಸರ್ಕಾರದವರು ಈ ದಿವಸ ಏನು ಕೆಲಸ ಕೊಟ್ಟಿದ್ದಾರೆ? ಈ ದಿವಸ ಅವರೊಬ್ಬರೂ ಏನೂ ಕೆಲಸ ಮಾಡುತ್ತಿಲ್ಲ. ಡಿ.ಪಿ.ಐ. ಆಫೀಸಿನಲ್ಲಿ ಈ ದಿವಸ ನಾಲ್ಕು ಗುಂಪುಗಳಾಗಿ-ಪಾರ್ಟಿಗಳಾಗಿ "ಎತ್ತು ಏರಿಗೆಳೆದರೆ-ಕೋಣ ನೀರಿಗೆಳೆದಂತೆ" ಈ ಪ್ರಾಥಮಿಕ ಶಿಕ್ಷಣದ ವಿಚಾರದಲ್ಲೂ ಮತ್ತು ಸೆಕೆಂಡರಿ ಸ್ಕೂಲು ವಿದ್ಯಾಭ್ಯಾಸದಲ್ಲೂ ಈ ನಾಲ್ಕು ಜನರೂ ಕಿತ್ತಾಡುತ್ತಿದ್ದಾರೆ. ಅಲ್ಲಿ ಕೆಲಸಗಳೊಂದೂ ಸರಿಯಾಗಿ ನಡೆಯುತ್ತಿಲ್ಲ. ಹೀಗಿರುವಾಗ ಇಂಥಾ ಇಲಾಖೆಗೆ ನಾವು 18 ಕೋಟಿ ರೂಪಾಯಿಗಳ ಹಣವನ್ನು ಕೊಡತಕ್ಕದ್ದು ಸರಿಯೇ ಎಂದು ಕೇಳುತ್ತೇನೆ. ಆ ನಾಲ್ಕು ಜನ ಅಧಿಕಾರಿಗಳ ಕೈಕೆಳಗಿರತಕ್ಕವರು ಗ್ರೂಪಿಸಂ ಮಾಡಿಕೊಂಡು ನಾನು ಯಾರ ಕಡೆಯಿದ್ದರೆ ನನಗೊಂದು ರಕ್ಷಣೆ ಸಿಕ್ಕುತ್ತದೆ ಎಂಬುದಾಗಿ ಲೆಕ್ಕ ಹಾಕತಕ್ಕವರಿರುವಾಗ ಅಲ್ಲೇನು ಕೆಲಸ ಆದೀತು, ಮಕ್ಕಳು ಹೇಗೆ ವಿದ್ಯಾವಂತರಾದಾರು? ಇಂಥಾ ಇಲಾಖೆಗೆ 18 ಕೋಟಿ ರೂಪಾಯಿಗಳನ್ನು ಕೊಡುವುದಾದರೂ ಹೇಗೆ? ಇದನ್ನೆಲ್ಲಾ ನೋಡಿದರೆ ಇದು ಒಂದು ಕನಸಿನ ರಾಜ್ಯವೆಂಬ ಭಾಸವುಂಟಾಗುತ್ತದೆ.

ಜಾತೀಯತೆ ಮತ್ತು ನೆಪೋಟಿಜಂ ಎಂದು ಕರೆದು ಅಪಖ್ಯಾತಿ ಹೊರಿಸಲು ತಯಾರಾಗದೇ ಹೋದರೂ

ಕೂಡ ಈ ವಿದ್ಯಾ ಇಲಾಖೆಯಲ್ಲಿ ಬಹಳ ಅನ್ಯಾಯವಾಗುತ್ತಿದೆ. ವಿದ್ಯಾಮಂತ್ರಿಗಳು ಸ್ವಲ್ಪ ಕಾಲ ಕುಳಿತು ಶಾಂತವಾಗಿ ವಿಚಾರ ಮಾಡಿ ನೋಡಿದರೆ ಇದೆಲ್ಲವೂ ಅವರಿಗೆ ಅರ್ಥವಾಗುತ್ತದೆ. ಡಿ.ಪಿ.ಐ. ಆಫೀಸಿನಲ್ಲಿ ಅನೇಕ ಭಾಗಗಳಾಗಿ ಅನುಕೂಲಕ್ಕಿಂತಲೂ ಅಪಾಯ ಜಾಸ್ತಿಯಾಗಿದೆ. ಅನೇಕ ನ್ಯೂನತೆಗಳು ಲೋಪದೋಷಗಳು ಇರುವುದನ್ನು ದೂರ ಮಾಡಬೇಕೆಂದು ನಾನು ಸರಕಾರಕ್ಕೆ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಡಿ.ಪಿ.ಐ. ಆಫೀಸಿನಲ್ಲಿ ಪ್ರಾರಂಭದಿಂದಲೂ ಕೆಲವರು ಇದ್ದಾರೆ. ಮೈಸೂರು ರಾಜ್ಯ ಜನ್ಮ ತಾಳಿದಾಗಿನಿಂದಲೂ ಅಂಥವರು ಇದ್ದಾರೆ. ಅಲ್ಲಿ ರೇಲ ಮೇಲೆ ಹೋಗುವುದನ್ನು ಬಿಡಿಸಿ ಡಿರೇಲ ಮಾಡುವ ಕೆಲಸಕಾರ್ಯಗಳು ನಡೆಯುತ್ತಿವೆ. ಯಾರದಾದರೂ ಕಿವಿ ತುಂಬಿ ಏನಾದರೂ ಹೇಳಿ ಜಾತೀಯ ವಾತಾವರಣವನ್ನು ಹೆಚ್ಚಿಸುತ್ತಿದ್ದಾರೆ. ಅಲ್ಲಿ ಈ ಜಾತೀಯ ವಾದವು ತಾಂಡವವಾಡುತ್ತಾ ಇದೆ. ನಮ್ಮ ಸರಕಾರದವರೇನೋ castless society ಮಾಡಲು ಹೊರಟಿದ್ದೇವೆಂದು ಹೇಳುತ್ತಾರೆ. ಜಾತಿಗೆ ಬೆಲೆಯಿಲ್ಲ ಎಂದು ಹೇಳುತ್ತಾರೆ. ಈ ರೀತಿ ಒಂದು ಒಳ್ಳೇ ಉದ್ದೇಶವನ್ನು ಇಟ್ಟುಕೊಂಡು ಸರಕಾರ ಹೊರಟಿದ್ದರೂ ಕೂಡ ಇವೊತ್ತಿನ ದಿವಸ ಡಿ.ಪಿ ಐ. ಆಫೀಸು ಮಾತ್ರ ಜಾತೀಯತೆಯ ರೌದ್ರ ನಾಟಕವಾಡುತ್ತಿದೆ.

ಶ್ರೀ ಎಸ್. ಆರ್. ಕಂಠಿ.—ಅದು ಯಾವ ಜಾತಿ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಲ್ಪ ಕಣ್ಣು ತೆರೆದು ನೋಡಿದರೆ ಅದು ಯಾವುದು ಎಂಬುದು ನಿಮಗೇ ಗೊತ್ತಾಗುತ್ತದೆ. ಬುಟ್ಟಿಯೊಳಗೆ ಹಾವನ್ನು ಮುಚ್ಚಿಟ್ಟು ಪುಂಗಿ ಊದುತ್ತಾ ಹಾವಾಡಿಗನು ಹಾವನ್ನು ಆಡಿಸುವ ಹಾಗೆ ಈ ಜಾತೀಯತೆಯ ಆಟ ನಡೆದಿದೆ. ಇಂಥಾದ್ದನ್ನು ಬೇಗನೇ ಓಡಿಸುವುದಕ್ಕೆ ಸತತ ಪ್ರಯತ್ನ ಮಾಡಬೇಕು. ಹಳ್ಳಿಗಳ ಕಡೆಗೆ ನಿಗಾ ಕೊಟ್ಟಿರುವರೇನು? 27,000 ಉಪಾಧ್ಯಾಯರುಗಳು ಬೇಕೆಂದು ಹೇಳುತ್ತಿದ್ದೀರಿ. 2000 ಉಪಾಧ್ಯಾಯರುಗಳು ಬೇಕು ಎಂದು ಈಗ ಹೇಳಿದ್ದೀರಿ. ಈಗ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿರುವಿರಿ. ಇದರಲ್ಲಿ ಓಟು ಸಂಪಾದಿಸುವ ಉದ್ದೇಶವಿದೆ. ಚುನಾವಣೆ ಹತ್ತಿರ ಬಂದ ಕೂಡಲೇ ಜಾರಿಗೆ ತಂದಿದ್ದೀರಿ. ಆರರಿಂದ ಹನ್ನೊಂದು ವರ್ಷಗಳವರೆಗಿನ ಎಲ್ಲ ಮಕ್ಕಳನ್ನೂ ವಿದ್ಯಾವಂತರನ್ನಾಗಿ ಮಾಡುತ್ತೇವೆಂದು ಹೇಳುತ್ತೀರಿ. ಎಲ್ಲ ಕಡೆ ಸ್ಕೂಲುಗಳನ್ನು ಕೊಟ್ಟಿದ್ದೀರಾ? ಸ್ಕೂಲು ಕೊಟ್ಟಿರುವ ಸ್ಥಳದಲ್ಲಿ ಮೇಷ್ಟ್ರುಗಳು ಎಲ್ಲಿ ಇದ್ದಾರೆ? ಇಂದಿನ ಚಿಕ್ಕ ಮಕ್ಕಳು ಮುಂದಿನ ಜನಾಂಗದ ಆಧಾರಸ್ತಂಭರು. ಅವರನ್ನು ವಿದ್ಯಾವಂತರನ್ನಾಗಿ ತಯಾರುಮಾಡಬೇಕು ಎಂದು ಮುಂತಾಗಿ ಹೇಳುತ್ತೀರಿ.

ಶ್ರೀ ಎಸ್. ಆರ್. ಕಂಠಿ.—ಕಡ್ಡಾಯ ಶಿಕ್ಷಣ ಪದ್ಧತಿ ಜಾರಿಗೆ ಬಂದು ಒಂದು ವರ್ಷದ ಮೇಲೆ ಆಯಿತು. ಹೀಗೆ ಇದ್ದರೂ ಕೂಡ ಚುನಾವಣೆಗೋಸ್ಕರ ಜಾರಿಗೆ ಬಂದಿದೆ ಎಂದು ಸುಮ್ಮನೇ ಹೇಳುತ್ತಿದ್ದೀರಲ್ಲ. ಕಡ್ಡಾಯ ಶಿಕ್ಷಣ ಪದ್ಧತಿಯು 1961-62ನೇ ಮಾರ್ಚದಿಂದ ಜಾರಿಗೆ ಬಂದಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಷ್ಟು ಅವಸರ ಅವಸರವಾಗಿ ಯಾವ ಉದ್ದೇಶಕ್ಕೋಸ್ಕರ ಜಾರಿಗೆ ತಂದಿದ್ದೀರಿ? ಚುನಾವಣೆಯಲ್ಲಿ ನಿಮಗೆ ಸಹಾಯವಾಗಬೇಕೆಂಬ ಉದ್ದೇಶದಿಂದಲೇ ಜಾರಿಗೆ ತರಲಾಯಿತು. ಕಡ್ಡಾಯ ಶಿಕ್ಷಣ ಪದ್ಧತಿ ಜಾರಿಗೆ ಬರುವುದರಿಂದ ಎಷ್ಟು ಸ್ಕೂಲುಗಳು ಬೇಕು? ಎಷ್ಟು ಶಾಲಾ ಕಟ್ಟಡಗಳು ಬೇಕು? ಎಷ್ಟು ಜನ ಉಪಾಧ್ಯಾಯರುಗಳು ಬೇಕು? ಎಷ್ಟೆಷ್ಟು ಈಗ ಒದಗಿಸಿದ್ದೀರಿ? ಇದೆಲ್ಲ ನಡೆದದ್ದು ಒಂದು ನಾಟಕವಲ್ಲವೇ?

ಶ್ರೀ ಎಸ್. ಆರ್. ಕಂಠಿ.—ಈ ವರ್ಷ ಎರಡು ಸಾವಿರ ಉಪಾಧ್ಯಾಯರುಗಳನ್ನು ನೇಮಕ ಮಾಡಲಾಗುವುದು. ಹೋದ ವರ್ಷ ನೇಮಕ ಮಾಡಿದ್ದು ಸೇರಿ ಒಟ್ಟು ನಾಲ್ಕು ಸಾವಿರ ಉಪಾಧ್ಯಾಯರ ನೇಮಕವಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕಡ್ಡಾಯ ಶಿಕ್ಷಣ ಜಾರಿಗೆ ತರಬೇಕಾದರೆ ಎಷ್ಟು ಸ್ಕೂಲು ಬೇಕು, ಎಷ್ಟು ಉಪಾಧ್ಯಾಯರು ಬೇಕು ಎನ್ನುವುದನ್ನು ವಿಚಾರ ಮಾಡಿದ್ದೀರೇನು? ಕೆಲಸ ಕಾರ್ಯಗಳು ತೀವ್ರಗತಿಯಿಂದ ನಡೆಸಲು ನೇಮಕ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಹಳ್ಳಿಗಳಲ್ಲಿ ಪ್ರತಿಯೊಂದು ಶಾಲೆಯಲ್ಲಿ ಮೇಷ್ಟ್ರು ಇಲ್ಲ, ಮೇಷ್ಟ್ರು ಇಲ್ಲದೆ ಶಾಲೆಯ ಬಾಗಿಲು ಮುಚ್ಚಿದ್ದಾರೆ. ನಿಮಗೆ ಓಟು ಕೊಡುವವರನ್ನು ಮಾತ್ರ ನೇಮಕ ಮಾಡಿದ್ದೀರಿ. ವಿದ್ಯಾ ಇಲಾಖೆಯಲ್ಲಿ ಒಂದು ಜಾತಿಯವರನ್ನು ಎತ್ತಿ ಹಿಡಿಯುವುದಕ್ಕೆ ಅವರ ನೇಮಕ ನಡೆದಿದೆ. ಇದರಿಂದ ಕಡ್ಡಾಯ ಶಿಕ್ಷಣ ಪದ್ಧತಿಯು ಸಫಲವಾಗಿಲ್ಲ. ಅದು ಸಫಲವಾಗುವುದು ಎಂದು ಹೇಳುವುದು ಸತ್ಯಕ್ಕೆ ದೂರವಾದದ್ದು ಎಂದು ಬಹಳ ನೊಂದ ಮನಸ್ಸಿನಿಂದ ಸರಕಾರಕ್ಕೆ ಹೇಳುತ್ತೇನೆ. ಉಪಾಧ್ಯಾಯರ ನೇಮಕದಲ್ಲಿ ಯಾವದೊಂದು ರೀತಿ ನೀತಿಗಳಿಲ್ಲ. ತುಮಕೂರು ಒಂದು ಜಿಲ್ಲೆಯಲ್ಲಿ ನೂರು ಜನ ಮೇಷ್ಟ್ರು ಪರ್ಮನೆಂಟ್ ಸ್ಥಳದಲ್ಲಿ ಭರ್ತಿಯಾಗಿದ್ದಾರೆ. ಒಂದು ಜಿಲ್ಲೆಯಲ್ಲಿ ಈ ರೀತಿ ಇಷ್ಟು ಅವ್ಯವಸ್ಥೆ ನಡೆಯುತ್ತಿದ್ದರೆ ಸಂಸ್ಥಾನದ ಬೇರೆ ಜಿಲ್ಲೆಗಳಲ್ಲಿ ಯಾವ ರೀತಿ ಕೆಲಸ ಕಾರ್ಯಗಳು ನಡೆದಿವೆ ಎಂಬುದನ್ನು ತಿಳಿದುಕೊಳ್ಳಬಹುದು. ವಿದ್ಯಾ ಇಲಾಖೆಯಲ್ಲಿ ಎಲ್ಲಿಯೋ ಲೋಪವಿದೆ. ಈಗ ನೀವು ಏನು ಬೇಕಾದ್ದು ಮಾಡಿದರೂ ಮುಂದೆ ದೇವರ ಮುಂದೆ ಇದಕ್ಕೆ ಉತ್ತರ ಹೇಳಬೇಕಾಗುತ್ತದೆ.

ಇನ್ನು ಉಪಾಧ್ಯಾಯರ ಟ್ರಾನ್ಸ್‌ಫರ್ ವಿಷಯ, ಒಂದೊಂದು ಊರಲ್ಲಿ ಹತ್ತು ಹದಿನೆಂಟು ವರ್ಷಗಳವರೆಗೆ ಮೇಷ್ಟ್ರು ಇದ್ದಾರೆ. ನಿಮ್ಮ ಪಕ್ಷಕ್ಕೆ ಸಹಾಯ ಮಾಡುವವರು ನಿಮಗೆ ಅನುಕೂಲವಾಗಿ ನಡೆದುಕೊಳ್ಳುವವರು ಒಂದೇ ಊರಿನಲ್ಲಿ ಹತ್ತು ಹದಿನೈದು ವರ್ಷ ಮೇಷ್ಟ್ರಾಗಿ ಇದ್ದಾರೆ. ಇಂಥ ಮೇಷ್ಟ್ರು ಪಕ್ಷದ ಹಿತಕ್ಕಾಗಿ ಓಡಾಡುತ್ತಾರೆ. ಮತ್ತು ಆ ಕೆಲಸಕ್ಕಾಗಿ ದುಡಿಯುತ್ತಾರೆ. ಇಂಥವರು ಮಕ್ಕಳಿಗೆ ಏನು ಕಲಿಸುತ್ತಾರೆ? ಇಂಥ ಮೇಷ್ಟ್ರುಗಳ ಕೈಯಲ್ಲಿ ಶಿಕ್ಷಣ ಪಡೆದು ತಯಾರಾಗುವ ಮಕ್ಕಳು ಎಷ್ಟು ಬುದ್ಧಿವಂತರಾಗುತ್ತಾರೆ? ಅವರು ರಾಜ್ಯವನ್ನೇನು ಕಟ್ಟುತ್ತಾರೆ? ನಾನು ಒಂದು ಸೂಚನೆ ಮಾಡುತ್ತೇನೆ. ಒಂದು ತಾಲ್ಲೂಕಿನಲ್ಲಿಯ ಉಪಾಧ್ಯಾಯರಿಗೆ ಬೇರೆ ಬೇರೆ ತಾಲ್ಲೂಕುಗಳಲ್ಲಿ ಕೆಲಸ ಕೊಡಿ, ಇದರಿಂದ ಯಾವ ಅನ್ಯಾಯವಾಗುವುದಿಲ್ಲ, ಸ್ಕೂಲುಗಳಲ್ಲಿ ವಿದ್ಯಾರ್ಥಿಗಳಿಗೆ ಓದಲು ಪಠ್ಯಪುಸ್ತಕಗಳಿಲ್ಲ. ಟೆಕ್ಸ್ಟ್ ಬುಕ್ ಕಮಿಟಿಯಲ್ಲಿ ನಡೆಯುತ್ತಿರುವ ಅನ್ಯಾಯ ದುರ್ವ್ಯವಹಾರ ನಿಲ್ಲಿಸಿ ಅದನ್ನು ಸರಿಪಡಿಸುತ್ತೀರಾ? ಮಂಡ್ಯ ಮತ್ತು ಮೈಸೂರು ಜಿಲ್ಲೆಗೆ 'ನಾಡ ಹಿರಿಯರು' ಎಂಬ ಒಂದು ಪುಸ್ತಕವನ್ನು ಪ್ರಿಸ್‌ಕ್ರೈಬ್ ಮಾಡಿದಿರಿ. ಆದರೆ ಅಲ್ಲಿ ಈ ಪುಸ್ತಕವಿಲ್ಲ, ಈ ರೀತಿ ಯಾಗುವುದಕ್ಕೆ ಕಾರಣವೇನು? ನಾಡ ಹಿರಿಯರು ಎಂಬ ಪುಸ್ತಕದಲ್ಲಿ ಮಹಮ್ಮದ ಪೈಗಂಬರರ ಬಗ್ಗೆ ಒಂದು ಪಾಠವಿದೆ. ಪಠ್ಯಪುಸ್ತಕದಲ್ಲಿ ಇದನ್ನು ಹಾಕು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ವುದು ಸರಿಯಲ್ಲ, ತೆಗೆಯಬೇಕು ಎಂದು ಮುಸಲ್ಮಾನ ಜನರು ಹೇಳಿದರು. ಇದರಿಂದ ಏನಾಯಿತು ಅಂದರೆ ಪುಸ್ತಕ ಒದಗಿಸುವುದನ್ನು ನಿಲ್ಲಿಸಲಾಯಿತು. ಇದಕ್ಕೆ ನೋಟೀಸು ಕೊಟ್ಟಿದ್ದಾರೆ. ಮೈಸೂರು ಹೈ ಕೋರ್ಟಿನಲ್ಲಿ ರಿಟ್ ಅರ್ಜಿ ಬಂದಿದೆ. ನಮ್ಮ ಕನ್ನಡ ರಾಜ್ಯದಲ್ಲಿ ಈ ರೀತಿ ಅನ್ಯಾಯ ನಡೆದಿದೆ. ಮನಸ್ಸಿಗೆ ಬಂದ ಹಾಗೆ ವ್ಯವಹಾರ ನಡೆದಿದೆ.

Collegiate Education ಬಗ್ಗೆ ಒಂದೆರಡು ಮಾತು ಮಾನ್ಯ ವಿದ್ಯಾ ಖಾತೆಯ ಮಂತ್ರಿಗಳಿಗೆ ಹೇಳುತ್ತೇನೆ. ಇವರು ಮಂತ್ರಿಗಳಾದ ಮೇಲೆ inconsistent statement ಮಾಡುತ್ತಿದ್ದಾರೆ. ಈಗ ಒಂದು ಹೇಳುತ್ತಾರೆ, ಮಧ್ಯಾಹ್ನ ಒಂದು ಹೇಳುತ್ತಾರೆ, ನಾಳೆ ಬೆಳಗ್ಗೆ ಒಂದು ಹೇಳುತ್ತಾರೆ. ನಿನ್ನೆಯಿಂದ ನಾವು ಕೇಳಿದಂಥ clarifications ಏನಿವೆ ಅವನ್ನು ಕೇಳುತ್ತಿದ್ದಾರೆ. ಅವರು ಏನಾದರೂ ಒಂದು ಮಾತನ್ನು ಆಡಿದರೆ, ಒಂದು ಹೇಳಿಕೆಯನ್ನು ಕೊಟ್ಟರೆ, ಅದು ಖಚಿತವಾಗಿರಬೇಕು. ಇವರು ಭದ್ರಾವತಿಯಲ್ಲಿ ಒಂದು ಹೇಳುತ್ತಾರೆ, ಅಲ್ಲಿಂದ ರೈಲಿನಲ್ಲಿ ಬರುವಾಗ ತುಮಕೂರಿನಲ್ಲಿ ಮತ್ತೊಂದು ಹೇಳುತ್ತಾರೆ. ಇದು ಸರಿಯಲ್ಲ. ಮಾನ್ಯ ವಿದ್ಯಾಮಂತ್ರಿಗಳು ಮುಖ್ಯಮಂತ್ರಿಗಳಾಗಿದ್ದಾಗ ಕೊಟ್ಟಿರತಕ್ಕ ಹೇಳಿಕೆಗಳ ಕಂತೆ ಇದೆ. ಅದರಲ್ಲಿ ಎಷ್ಟು inconsistency ಇದೆ ಎಂಬುದನ್ನು ತೋರಿಸಲು ಅದನ್ನೆಲ್ಲ ಮಾನ್ಯ ಅಧ್ಯಕ್ಷರ ಟೇಬಲ್ ಮೇಲೆ ಇಡುತ್ತೇನೆ. ಇದನ್ನೆಲ್ಲ ಏಕೆ ಹೇಳುತ್ತೇನೆಂದರೆ ಅವರು ಒಂದಕ್ಕೊಂದು ಸಂಬಂಧವಿಲ್ಲದ ಹೇಳಿಕೆಗಳನ್ನು ಮಾಡಬಾರದು. ಈಗ Collegiate Education Director ಆಗಿ ನೇಮಕ ಮಾಡಿರುವವರು ಸೆಂಟ್ರಲ್ ಕಾಲೇಜಿನಲ್ಲಿ Mathematics Professor ಆಗಿಯೂ ಇದ್ದಾರೆ. ಇವೆರಡರಲ್ಲಿ ಯಾವುದು ಸರಿ ?

2-30 P.M.

ಶ್ರೀ ಎಸ್. ಆರ್. ಕಂಠಿ.—ಎರಡೂ ಹೌದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—'He is appointed as Director temporarily' ಎಂದು ಸರ್ಕಾರಿ ಆರ್ಡರಿನಲ್ಲಿದೆ. I don't know whether any in charge arrangements have been made.

ಇಲ್ಲಿ ನಡೆಯುವ ದುರ್ವ್ಯವಹಾರಗಳನ್ನು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು. ಇಲ್ಲಿ tutors, demonstrators ಎಂದು ಮಾಡಿದರೆ ಅವರೆಲ್ಲ ಅಸಿಸ್ಟೆಂಟ್ ಲೆಕ್ಚರರುಗಳಾಗುತ್ತಾರೆ ಎಂದು ಒಂದು ದಿನ ಹೇಳುತ್ತಾರೆ. ಈಗ tutors, demonstrator ಎಂದು ನೇಮಕ ಮಾಡಿದಮೇಲೆ ನಾವು tutor ಕೆಲಸ ಮಾಡುತ್ತೇವೆ, demonstrator ಕೆಲಸ ಮಾಡುತ್ತೇವೆ, ನಾವು ಬೇರೆ ಏನೂ ಹೇಳುವುದಿಲ್ಲ, ನಮ್ಮನ್ನು ಪ್ರಶ್ನಿಸಬೇಡಿ ಎಂದು ಹೇಳುತ್ತಾರೆ. ನಾನು ಒಂದು ವಿಷಯವನ್ನು ನೊಂದ ಮನಸ್ಸಿನಿಂದ ಹೇಳುತ್ತೇನೆ. ಈ ದೇಶದಲ್ಲಿ ವಿದ್ಯಾಭ್ಯಾಸ, ಕೈಗಾರಿಕೆಗಳು, ಇವೆಲ್ಲ ನಮ್ಮದು ಎಂದು ಹೇಳುತ್ತಾರೆ. ಈ ದೇಶದಲ್ಲಿ ಇನ್ನು ಯಾರೂ ಕೈಹಾಕುವುದಕ್ಕೆ ಸಾಧ್ಯವಿಲ್ಲ, ಇನ್ನು ಇಪ್ಪತ್ತು ವರ್ಷ ಈ ರಾಜ್ಯದಲ್ಲಿ ಯಾರೂ ನಮ್ಮನ್ನು ಕದಲಿಸುವುದಕ್ಕೆ ಸಾಧ್ಯವಿಲ್ಲ ಎಂದು ಬಹಿರಂಗವಾಗಿ ಹೇಳುತ್ತಾರೆ. ಇದರ ಹಿಂದೆ ಅಡಗಿರುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಒಬ್ಬ permanent incumbentನ್ನು Collegiate Education Director ಆಗಿ ಮಾಡದೆ ಹೋದರೆ ಕಾಲೇಜುಗಳಲ್ಲಿರುವ ಲೆಕ್ಚರರುಗಳಿಗೆ, ಡೆಮಾನ್ಸ್ಟ್ರೇಟರುಗಳಿಗೆ, ಪ್ರೊಫೆಸರಗಳಿಗೆ ಆಗತಕ್ಕ ಅನ್ಯಾಯವನ್ನು ಖಂಡಿತವಾಗಿಯೂ ತಡೆಗಟ್ಟುವುದಕ್ಕಾಗುವುದಿಲ್ಲ. ಇವನ್ನೆಲ್ಲ ಹೀಗೆಯೇ ಬಿಟ್ಟುಬಿಟ್ಟರೆ ಅದರಿಂದ ಶ್ರೀ ನಿಜಲಿಂಗಪ್ಪನವರ ಸ್ಥಿತಿ ಅಭದ್ರವಾಗುವುದೋ ಏನೋ ಎನ್ನುವ ಭಯವಿದೆ ಎಂದು ನಾನು ವಿದ್ಯಾಮಂತ್ರಿಗಳಲ್ಲಿ ಬಹಳ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ವಿದ್ಯಾಖಾತೆಯಲ್ಲಿರುವ ಲೋಪಗಳನ್ನು ತಿದ್ದಿ ನೆಟ್ಟಗೆ ಮಾಡದೆ ಇದ್ದರೆ ದೇಶದಲ್ಲಿ ಉಗ್ರವಾದ ಚಳವಳಿ ನಡೆದೀತು, ಈ ಸಭೆಯ ನಾಯಕರಾದ ಶ್ರೀ ನಿಜಲಿಂಗಪ್ಪನವರಿಗೆ ಕೆಟ್ಟ ಹೆಸರು ಬಂದೀತು ಎಂದು ಎಚ್ಚರಿಸುತ್ತೇನೆ. ಈಗಲಾದರೂ ಈ ಖಾತೆಯಲ್ಲಿರುವ ಲೋಪಗಳನ್ನೆಲ್ಲ ಸರಿ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri ANNA RAO GANAMUKHI (Afzalpur).—Mr. Speaker, I should like to offer a few suggestions in connection with this demand. We know that the advancement of a country entirely depends upon the progress made in the educational field. Today we have undertaken a vast and important task of compulsory education in our country and we have started in every village, a primary school. Therefore, I say that Three-fourths of our Budget provided in the Plan is being diverted towards compulsory primary education. Yesterday a question was posed that much of wastage and stagnation is occurring in our primary schools and therefore whatever we are spending is going down the drain. To some extent this accusation is just because in primary schools the wastage is due to the negligence of the parents and also the number of children that are to attend the primary schools are not attending because the parents do not take interest in sending them to schools. There is stagnation because many students are not promoted automatically. On the other hand, they remain in the same class for more than one year and therefore we have to appoint well qualified and trained teachers. This year, I understand, many of the schools are without teachers because the employment agency which was fixed last year has been abolished. The D.E.O. and the D.D.P.I. are not competent to appoint primary school teachers even temporarily this year. Therefore, the schools are without teachers and it is said that even local

candidates are not permitted to be appointed. The appointing agency is the Divisional Recruitment Committee now. So, urgent action should be taken to fill these posts so that the teachers may attend to their work.

We know that many things are wanting in our schools. We do not have adequate equipment, furniture, class rooms, etc. We know that we need a more number of class rooms but the Government is paying only rupees one thousand. The progress of construction of school buildings has been slow because the grant of Rs. 1,000 is not enough to meet the expenditure. We see that the estimates of the P.W.D. are revised year by year. Here, the sum of Rs. 3,000 is estimated to be the fixed expenditure and I should say that in our area a room requires at least about Rs. 5,000. Therefore, I should like to say that the Planning Commission should be approached in this behalf by the Government. Otherwise let Rs. 1,000 be given from the planned provision and another one or two thousands from non-plan expenditure so that the construction work may not be stopped. If this suggestion is accepted, I think even the non-plan expenditure can be incurred on developmental activities. We cannot strictly say that we should not pay for non-plan items in respect of building schools. For development activities we may go out of the plan items and spend.

Sri G. VENKATAI GOWDA (Palya).—Does the Hon'ble Member suggest that building schools is a developmental activity ?

Sri ANNA RAO GANAMUKHI.—It all depends on what attitude you take. This is a suggestion for action and if the Government can revise the rules then many class rooms can come up. Otherwise the whole thing will be stopped. If the school betterment committees have to function throughout the State in an efficent manner, and if they so function, then I think, we can give a fillip to compulsory education only through these betterment committees. We had one School betterment conference in Bijapur District and we have taken a step towards that object. Now, again, I suggest to the Education Minister to hold such conferences in every district and in every taluk, so that we may collect money for mid-day meal scheme, for attendance scholarship scheme, for giving uniforms to the students and also for equipment and furniture. If this is not done, it will be like fighting an octopus with a needle. Unless you collect money, I do not think it is possible to make progress.

With regard to the progress of primary education, I should say that we have already covered 71 per cent of the population of school going population in the age group of six to eight, and during the Third Plan, we have fixed the target at 90 per cent, leaving ten per cent of the students as those who are physically handicapped and mentally disabled. Therefore, if we are to provide for this 90 per cent of the student population, which will come to about thirty-four lakhs, I think, Sir, this problem cannot be tackled with very meagre sums.

Sri M. Y. GHORPADE (Sandur).—If the Hon'ble Member yields, he just now made a serious statement that ten per cent of the school going children were physically handicapped and unable to receive education. Is it authoritatively accepted by the Government that ten per cent of the school going children are handicapped for receiving education ?

Sri ANNA RAO GANAMUKHI.—It is the estimate given. That is the margin which has to be given for students who cannot attend schools and who are handicapped.

As far as primary education is concerned, constitutionally, we are expanding the scope and many of the student population will be brought into the school. But at the high school level, we want to concentrate on raising the standards, because we want school teachers who are educated in high schools and who pass with distinction, so that they may go and teach children in primary schools. We want good teachers for high schools and for this purpose, unless we get candidates who have passed with distinction in the University, we will

(SRI ANNA RAO GANAMUKHI)

not be able to get good teachers. Therefore, the problem of expanding is mostly with regard to primary education. But as far as high school and university education is concerned, we want to raise their standards so that we may get good teachers for primary and high schools. One point has to be mentioned here and that is, as far as high schools are concerned, we are starting and we have already started many high schools. Recently it was stated—the Education Minister has formulated a policy that the Government will not give grant for a period of three years to newly started high schools. I feel that this is a very serious statement to make. If the Government wants that no high schools should be started within a range of five or six miles, that would be correct. But if some schools are going to be started on this condition, they will go to the extent of starting as many as five or six in one mile radius. Therefore, it would be hazardous to risk this. My suggestion is that no high school should be granted on this basis. On the other hand, we can give whatever grant that may be given. Otherwise, if this condition only is put, then within a radious of three to four miles, people may start a high school. This should not be done.

There is one more point I would like to touch upon and that is the rise in fees in the colleges. I would at the outset say that if the college fee is to be raised, I have no objection to its rise up to some level to bring in uniformity. Sir, in the Hyderabad Karnatak area, one proposal came to raise the fee of colleges under Karnatak University that was accepted by the Government. But what we did was that this order was spread over for a period of five years. Here I do not think that this is done. If the Government wanted to raise the fees, they ought to have done it on a phased basis, so that the rise might not be felt by the parent and the student.

SRI S. R. KANTHI.—Why did you agree to the raising of fees in the Hyderabad area all of a sudden?

SRI ANNA RAO GANAMUKHI.—We spread the increase over a period of five years. Similarly, here also, if the Government wanted to increase the fee, they should have adopted the same procedure and the whole increase could have been spread over a period of five years.

SRI S. R. KANTHI.—Am I to understand from the Hon'ble Member that phasing was done in Hyderabad Karnatak area? Was a cabinet decision taken before it was done? If so I am not aware of it.

SRI ANNA RAO GANAMUKHI.—I did not say thatyou were aware and that you had not done it. The Karnataka University suggested, with regard to the raising of college fees, that as the parents would be hit hard if it was suddenly raised, the increase should be phased in five years. I am suggesting that in the present case also; it may be done in a similar manner so that the parents may not be hit hard and may not feel any difficulty.

SRI S. R. KANTHI.—It is not a big rise.

SRI ANNA RAO GANAMUKHI.—I have no objection, Sir. As far as higher education is concerned, I wish to say that this Government has adopted a policy of imparting education through the medium of the regional language, Kannada, and this, I think, Government should adhere to. There is no question of changing the medium in the high school, and therefore, I think, the same policy should be continued. It has been suggested that because our students have to compete in All-India competitive examinations, English should be the medium of instruction in colleges. Here, Sir, I should say that the medium of instruction in our colleges and universities is English but it is not the only medium, because we have introduced Kannada medium in some of the pre-degree courses and I understand that Kannada medium has been abolished from this year. I think, Sir, that Government should not do like that. Because the regional language is one of the languages which the State has to encourage. Otherwise, it will have a very bad effect on Kannada.

ಶ್ರೀ ಎಸ್. ಆರ್. ಕಂಠಿ.—ನೀವು ಹೇಳಿದ್ದು ಅರ್ಥ ವಾಗಲಿಲ್ಲ.

Sri ANNA RAO GANAMUKHI.—I have heard–in pre-university classes.–

Sri V. S. PATIL (Belgaum I).—On a point of order, Sir. In this House, Members are allowed to talk between themselves and every speech must be addressed to the Chair. I am hearing the Hon'ble Minister and the ex-Minister exchanging words between them. Is it allowed?

Sri S. R. KANTHI.—Not exchanging words, Sir.

Mr. SPEAKER.—They are clarifying the position. They are not exchanging words.

Sri ANNA RAO GANAMUKHI.—Even the Centra Advisory Board took a decision that in the universities the regional language should be the medium of instruction. Every one of the States is represented in the Central Advisory Board and that decision is communicated to the Centre and the States. We have not taken any action on that so far. At the same time I feel that as long as English is there we should not meddle with it because it is the language of science and higher technology, but at the same time in whatever classes we have introduced Kannada that should not be disturbed because the regional language happens to be the medium of instruction in the college stage. One thing I must say in this connection and that is we must lay stress more on raising the standard of English and we should study English not as a medium of instruction but as a language. Even in high schools and middle schools we should introduce English right from the 3rd standard itself so that as a language our children may be proficient in English. Many people seem to think that the study of a language depends upon its being the medium of instruction in high school and university stages, but here I should say that we should not stress that aspect because if we study a language well, then even if we study all the subjects in the regional language we can still be proficient in English. Therefore we should try to introduce English right from the 3rd standard itself. When we introduce the regional language in colleges there is one difficulty and that is unless we get good books translated into Kannada and unless we get good Professors, the scheme cannot be a success. Our experience is that a teacher who teaches a subject knows no language; he does not know the regional language. And one who knows the regional language does not teach the subject well. One who is well-versed in a subject does not know the language and so he cannot teach the subject in that language. It is, therefore, highly necessary that we must prepare good text books and render them in to Kannada.

Sri S. SIVAPPA.—Is it the idea of the Member that one can speak better in a foreign language than in his mother tongue?

Sri ANNA RAO GANAMUKHI.—Not that. What I submit is that those who study the subject in a different language cannot render it in the regional language. Therefore, what we propose now is to have English language medium in colleges and universities, Kannada or the regional language at the high school stage and the mother tongue or the regional language at the primary stage. This should be the policy of Government. Whatever may be the love we have for English, we cannot have English for ever in our country because it is a foreign language. Don't you see in Japan they have got so much of scientific literature in their own language? In other countries also they have got books in science on their own language. Therefore, it would not be correct to say that we will not have books on science and technology in regional languages. On the other hand, if we begin rght from now to prepare good text books in the regional language, there is no reason why we should not be able to give effective instruction in colleges in the regional language. As I have already stated, we should study English as a language, but we do not require English medium. We require to study English only as a language and if we do that efficiently, there will be no handicap whatever to teach subjects in English. There will be one difficulty

(SRI ANNA RAO GANAMUKHI)

when we begin to teach all subjects in the regional language in colleges and that is we will not be able to appoint examiners and paper-setters for those subjects from other universities. That handicap will always be there. But for that reason, can we go on having English for ever in our country? We have to phase the programme in such a way that ultimately we must come to the regional language and introduce the regional language in colleges as medium of instruction. I have no objection if you study English as a language at every stage right from the primary to the university stage.

Sri M. Y. GHORPADE.—If we study English only as a language, do you think we will be able to use English efficiently for inter-State and Central purposes?

Sri ANNA RAO GANAMUKHI.—This handicap is only a temporary phase because ultimately on inter-State matters we have to correspond with the Centre and the States in Hindi. Because we have to compete in the I.A.S. and other all-India examinations, are we expected to have English permanently in our country as the medium? Even the Centre will have to take to Hindi in place of English some years hence.

Sri M. Y. GHORPADE.—Is the Hon'ble Member willing to accept Hindi as the sole national language for all central purposes, whether it be inter-State correspondence or references to the Centre?

Sri ANNA RAO GANAMUKHI.—Hindi is also a compulsory subject in every high school. If we learn Hindi then every one of us will know Hindi and we will be able to correspond in Hindi.

Sri G. VENKATAI GOWDA.—Is it for the purpose of developing the regional language that you want it to be the medium of instruction?

Sri ANNA RAO GANAMUKHI.—Ultimately we have to change the medium and we have to render scientific and technological books in to Kannada. Otherwise you abolish the whole thing and have English for ever or have Hindi for ever. That is not possible in the Southern States for the present.

An HON'BLE MEMBER.—What will bethe fate of our children if they have got to be perfect in three languages at the same time?

Sri ANNA RAO GANAMUKHI.—The three language formula has been accepted by the States. We have to be efficient in as many languages as possible. In European countries they learn about five languages. It is not at all a handicap, but it will be beneficial to us.

As I have already stated, the Central Advisory Board has taken a decision about the regional languages. All the States are represented on that Board and whatever decision is taken there, is the collective decision because all Vice-Chancellors and other prominent educationists are there in that body. These decisions are sent to the Central and the State Governments and so we should not tinker with this problem.

Mr. SPEAKER.—Is the Hon'ble Member taking more time?

Sri ANNA RAO GANAMUKHI.—I will finish in five minutes.

As regards high school education, an important decision has been taken to abolish the eleventh class, i.e., the last year of the high school. Already we have sixty-one higher secondary schools and sixty-nine multipurpose high schools. The multipurpose schools are necessarily higher secondary schools. The assumption was that the students who studied in high schools would leave the school for ever and take up some assignment or the other. But what is happening is that the standard of education and their English is not good. Those who study in the eleventh class, if they join the first year of the degree course, are found deficient in English. So educationists now want that the students should study two years Intermediate course of the past which has again to be revived. This will be reversing the whole process. The Secondary Education Commission made a recommendation and sent to the Centre and the States that the period of high school education should be raised by one year and that university education should be reduced by one year. So the three year degree course was introduced in colleges

and one year was attached to the high school stage. But now it has been said that the high school education has become more or less purposeless because students always want to join the first grade colleges and if they join the first grade colleges they will be deficient not only in English, but they would not have had sufficient education during these 11 year course. So the State Government has already taken a decision that we must stick to the 11 year course. Before actually abolishing the eleventh class we must take a definite decision. The Madras Government has taken a decision on that. This question was raised in this House also and so the Government should take a definite decision. If it is considered that the eleventh class is necessary we should not raise the pre-university education by one more year, but we must go ahead with the multi-purpose schools.

Mr. SPEAKER.—The House will now rise and meet again after half an hour.

The House adjourned at Five Minutes past Three of the Clock and re-assembled at Thirty-Five Minutes past Three of the Clock.

[MR. DEPUTY SPEAKER in the Chair].

ಶ್ರೀ ಜಿ. ವೆಂಕಟೇ ಗೌಡ.—ಮಾನ್ಯ ಅಧ್ಯಕ್ಷರೇ ಈಗ ತಾನೆ ನನ್ನ ಮಿತ್ರರಾದ ಶ್ರೀಮಾನ್ ಅಣ್ಣಾರಾವ್ ಗಣಮುಖಿಯವರು ಶಿಕ್ಷಣದ ಬೇಡಿಕೆಯ ಬಗ್ಗೆ ಪ್ರಸ್ತಾಪ ಮಾಡಿದ್ದನ್ನು ನಾನು ಕೇಳಿದೆ. ನಮ್ಮ ಕನ್ನಡ ಭಾಷೆಯನ್ನು ಬೆಳೆಸುವುದಕ್ಕೋಸ್ಕರ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಶಿಕ್ಷಣದ ಮಾಧ್ಯಮ ಕನ್ನಡವಾಗಬೇಕು ಎನ್ನುವ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದರು. ನಾನಾದರೂ ಕೇಳುತ್ತೇನೆ ಕನ್ನಡ ಭಾಷೆಯನ್ನು ಬೆಳೆಸುವುದಕ್ಕೆ ಈಗಿರತಕ್ಕ ಸಾಹಿತ್ಯ ಮತ್ತು ಕಾವ್ಯವನ್ನು ರಕ್ಷಣೆ ಮಾಡುವುದಕ್ಕೆ, ಉಳಿಸಿಕೊಳ್ಳುವುದಕ್ಕೆ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಶಿಕ್ಷಣ ಮಾಧ್ಯಮವನ್ನು ಕನ್ನಡ ಮಾಡಬೇಕಾಗಿದೆಯೇ? ಈ ಕಾರಣಕ್ಕಾಗಿ ನಾವು ಕನ್ನಡವನ್ನು ಮಾಧ್ಯಮ ಮಾಡ ಬೇಕಾಗಿದೆ ಎನ್ನತಕ್ಕ ಪ್ರಶ್ನೆಯನ್ನು ಪರಿಶೀಲನೆ ಮಾಡಬೇಕು. ಇದರಿಂದ ಆಗತಕ್ಕ ಪರಿಣಾಮ ಎಷ್ಟರ ಮಟ್ಟಿಗೆ ನಮ್ಮ ಜನತೆಯ ಮೇಲೆ ರಾಜ್ಯದ ಮೇಲೆ ಆಗುತ್ತದೆ ಎನ್ನತಕ್ಕದ್ದನ್ನು ಪರಿಶೀಲನೆ ಮಾಡುವುದು ಅಗತ್ಯ. ಶ್ರೀಮಾನ್ ಅಣ್ಣಾರಾವ್ ಗಣಮುಖಿಯವರಿಗೂ ಮತ್ತು ನಮ್ಮ ವಿರೋಧಪಕ್ಷದ ನಾಯಕರಾದ ಶ್ರೀ ಶಿವಪ್ಪನವರಿಗೂ ಯಾವ ರೀತಿ ಕನ್ನಡದಲ್ಲಿ ಅಭಿಮಾನ ಇದೆಯೋ ಅದೇ ರೀತಿ ಈ ಮಾನ್ಯ ಸಭೆಯಲ್ಲಿರತಕ್ಕ ಮಾನ್ಯ ಸದಸ್ಯರೆಲ್ಲರಿಗೂ ಇದೆ, ಮತ್ತು ನನಗೂ ಇದೆ. ಅದರಲ್ಲಿರತಕ್ಕ ಸಾಹಿತ್ಯವನ್ನು ಉಳಿಸಬೇಕು ಮತ್ತು ಕಾವ್ಯವನ್ನು ರಕ್ಷಣೆ ಮಾಡಬೇಕು. ಅದಕ್ಕೆ ನಾವು ಒಂದು ಮಾರ್ಗವನ್ನು ಕಂಡು ಹಿಡಿಯುವುದಕ್ಕೋಸ್ಕರ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಶಿಕ್ಷಣವನ್ನು ಕನ್ನಡದಲ್ಲಿ ಮಾಡಬೇಕು, ಅದರಿಂದ ಕನ್ನಡ ಭಾಷೆ ಬೆಳೆಯುತ್ತದೆ ಎಂದು ಹೇಳಿದರೆ ನಿಜವಾಗಿಯೂ ಅದಕ್ಕಿಂತ ಶೋಚನೀಯವಾದ ಸಂಗತಿ ಬೇರೆ ಇಲ್ಲ ಎಂದು ನನಗಾದರೂ ಅನಿಸುತ್ತದೆ. ಶ್ರೀಮಾನ್ ಅಣ್ಣಾರಾವ್ ಗಣಮುಖಿಯವರು ಹೇಳಿದರು ಇಂಗ್ಲಿಷ್ ಭಾಷೆಯಲ್ಲಿ ಬೇಕಾದರೆ ಸ್ಪೆಷಲೈಜ್ ಮಾಡಿಕೊಳ್ಳಲಿ ಎಂದು. ಒಂದು ಭಾಷೆಯನ್ನು ಕರತಲಾಮಲಕ ಮಾಡಿಕೊಂಡು ಇತರ ಭಾಷೆಯ ತರಪೇತಿ ಹೊಂದಿ ಇತರ ಭಾಷೆಯಲ್ಲಿ ವ್ಯವಹಾರ ಮಾಡುವುದಕ್ಕೆ ಸಾಧ್ಯ ಎನ್ನುವ ಅಭಿಪ್ರಾಯವನ್ನು ಅವರು ಕೊಟ್ಟರು. ಇದು ಎಷ್ಟರ ಮಟ್ಟಿಗೆ ಸಾಧ್ಯವಾಗುತ್ತದೆ ಎಂದು ನನಗಾದರೂ ತೋರುವುದಿಲ್ಲ. ಇವೊತ್ತು ವಿಶ್ವವಿದ್ಯಾನಿಲಯ ಮತ್ತು ಹೈಸ್ಕೂಲುಗಳಲ್ಲಿ ಕನ್ನಡ ಮಾಧ್ಯಮವನ್ನು ತೆಗೆದುಕೊಂಡು ವ್ಯಾಸಂಗ ಮಾಡಿದ ಮಕ್ಕಳನ್ನೂ ನಾನು ನೋಡಿದ್ದೇನೆ. ಇಂಗ್ಲೀಷ್ ಮಾಧ್ಯಮವನ್ನು ತೆಗೆದುಕೊಂಡು ವ್ಯಾಸಂಗ ಮಾಡಿರತಕ್ಕ ಮಕ್ಕಳನ್ನೂ ನಾನು ನೋಡಿದ್ದೇನೆ. ಕನ್ನಡ ಭಾಷೆಯನ್ನು ಸೆಕೆಂಡ್ ಲಾಂಗ್ವೇಜ್ ತೆಗೆದುಕೊಂಡು ಇಂಗ್ಲೀಷ್ ಮಾಧ್ಯಮ ತೆಗೆದುಕೊಂಡು ವ್ಯಾಸಂಗ ಮಾಡತಕ್ಕ ಮಕ್ಕಳು ಹೆಚ್ಚಿಗೆ ನಂಬರುಗಳನ್ನು ಗಳಿಸಿಕೊಂಡಿರತಕ್ಕ ನಿದರ್ಶನಗಳು ಬಹಳ ಇವೆ. ಕನ್ನಡ ಭಾಷೆಯನ್ನು ಬೆಳೆಸುವುದಕ್ಕೋಸ್ಕರ ಶಿಕ್ಷಣ ಮಾಧ್ಯಮವನ್ನು ಕನ್ನಡ ಮಾಡಬೇಕು ಎನ್ನುವುದರಲ್ಲಿ ಅರ್ಥವಿಲ್ಲ ಎಂದು ನಾನಾದರೂ ಹೇಳುತ್ತೇನೆ. ಏಕೆಂದರೆ ನಮ್ಮ ದೇಶದ ಒಂದು ಭಾಷೆ ಈ ಇಂಗ್ಲೀಷನ್ನು replace ಮಾಡುವ ಪರಿಸ್ಥಿತಿಗೆ ಬರುವತನಕ ಇಂಗ್ಲೀಷನ್ನು ದೂರ ಮಾಡುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಆದರಿಂದ ಪರಿಣಾಮ ನೆಟ್ಟಗಾಗುವುದಿಲ್ಲ ಎಂದು ಸರ್ಕಾರದವರಿಗೆ ಈ ಸಂದರ್ಭದಲ್ಲಿ ತಿಳಿಸಲು ಇಚ್ಛಿಸುತ್ತೇನೆ

ಸ್ವಾಮಿ, ಈ ಪ್ರಾಥಮಿಕ ಶಿಕ್ಷಣದ ವ್ಯವಹಾರ ನಮ್ಮ ದೇಶದಲ್ಲಿ ಏನಿದೆ ಅದು ಬಹಳ ಅವ್ಯವಸ್ಥೆಯಾಗಿದೆ ಎಂದರೆ ತಪ್ಪಾಗಲಾರದು. ಈಚೀಚೆಗೆ ನಮ್ಮ ಸರ್ಕಾರದ ಧೋರಣೆ ಎಲ್ಲಾ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿ ಕೊಡಬೇಕು, ಅದಕ್ಕೆ ಸೌಕರ್ಯ ಒದಗಿಸಬೇಕೆಂದು ಇದೆ. ಇದು ಎಷ್ಟು ಮಟ್ಟಿಗೆ ಸಮರ್ಪಕವಾಗಿ ನಡೆಯುತ್ತ ಇದೆ ಎನ್ನುವುದನ್ನು ಸರ್ಕಾರ ಸರಿಯಾದ ರೀತಿಯಲ್ಲಿ ಮೇಲ್ವಿಚಾರಣೆ ಮಾಡುತ್ತಾ ಇಲ್ಲ ಎಂದು ನಾನಾದರೂ ಹೇಳಬೇಕಾಗಿದೆ. ಬೇಕಾದ ಸಲಕರಣೆಗಳು ಇಲ್ಲ. ಹಳ್ಳಿ ಹಳ್ಳಿಗೆ ಶಾಲೆಗಳನ್ನು ಮಂಜೂರು ಮಾಡಿದ್ದೀರಿ. ಸೇರಿದಂಥಾ ಮಕ್ಕಳು ಶಾಲೆಗೆ ಬರುತ್ತಾ ಇದ್ದಾರೆಯೇ; ನೇಮಕ ಮಾಡಿದ ಉಪಾಧ್ಯಾಯರು ಕೆಲಸಮಾಡುತ್ತಾ ಇದ್ದಾರೆಯೇ, ಎಷ್ಟು ಮಟ್ಟಿಗೆ ಸಲಕರಣೆಗಳನ್ನು ಒದಗಿಸಿದೆ ಎಂಬ ವಿಷಯದಲ್ಲಿ ಮೇಲ್ವಿಚಾರಣೆ ಇಲ್ಲದೆ ಬರಿಯ compulsory education extension ಆಗಿದೆಯೇ ಹೊರತು ಅದರಿಂದ ಸಮರ್ಪಕವಾದ, ಪರಿಣಾಮಕಾರಿಯಾದ ಪ್ರತಿಫಲ ದೊರಕುತ್ತಿಲ್ಲ ಎಂದರೆ ತಪ್ಪಾಗುವುದಿಲ್ಲ ಆದ್ದರಿಂದ ಮೇಲ್ವಿಚಾರಕರು ಯಾರಿದ್ದಾರೆ ಅವರು ಆದಷ್ಟು ಮಟ್ಟಿಗೆ ಮೇಲ್ವಿಚಾರಣೆ ಮಾಡುವುದಲ್ಲದೆ ಪ್ರಾಥಮಿಕ ಶಾಲೆಗೆ ಏನೊಂದು ಸಲಕರಣೆ ಬೇಕೋ ಅದನ್ನು ಒದಗಿಸದಿದ್ದರೆ ನಿಜವಾಗಿಯೂ ಪ್ರಾಥಮಿಕ ಶಿಕ್ಷಣಕೊಡುವುದು ಸಮರ್ಪಕವಾಗಿ ಆಗುವುದಿಲ್ಲ. ಸಣ್ಣ ಮಕ್ಕಳ ಭವಿಷ್ಯವನ್ನು ರೂಪಿಸತಕ್ಕ ಈ ಒಂದು

(ಶ್ರೀ ಜಿ. ವೆಂಕಟೇಗೌಡ)

ವ್ಯವಸ್ಥೆಯಲ್ಲಿ ಎಷ್ಟು ಮಟ್ಟಿಗೆ ಜವಾಬ್ದಾರಿಯನ್ನು ಅಧಿಕಾರಿಗಳು ವಹಿಸಬೇಕು ಎನ್ನುವುದನ್ನು ಈ ಮೂಲಕ ಸರ್ಕಾರದವರಿಗೆ ಎಚ್ಚರಿಕೆ ಕೊಡುತ್ತಾ ಇದ್ದೇನೆ. ಏಕೆಂದರೆ ಈ ದಿವಸ ಎಲ್ಲರೂ ಸರಿಯಾದ ಶಿಕ್ಷಣ ಕೊಡಬೇಕೆನ್ನುವ ವಿಚಾರದಲ್ಲಿ ಸಮರ್ಪಕವಾಗಿ ಜವಾಬ್ದಾರಿಯುತವಾಗಿ ಕೆಲಸ ಮಾಡದಿದ್ದರೆ ಆ ಮಕ್ಕಳ ಭವಿಷ್ಯ ಎಷ್ಟು ಮಟ್ಟಿಗೆ ಆಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು.

Sri B. CHANNABYRE GOWDA.—Point of order, Sir. ಶಿಕ್ಷಣದ ಬೇಡಿಕೆ ಮೇಲೆ ಚರ್ಚೆನಡೆಯುತ್ತಾ ಇರುವಾಗ ಶಿಕ್ಷಣ ಮಂತ್ರಿಗಳೇ ಇಲ್ಲ, ಅವರನ್ನು ಕರೆಸಬೇಕು, ಸ್ವಾಮಿ.

ಉಪಾಧ್ಯಕ್ಷರು.—ಡೆಪ್ಯೂಟಿ ಮಿನಿಸ್ಟರು ಇದ್ದಾರೆ.

ಕೆಲವು ಸದಸ್ಯರು.—ಮಿನಿಸ್ಟರು ಇಲ್ಲದೇ ಇದ್ದರೆ ಹೇಗೆ, ಸ್ವಾಮಿ!

ಉಪಾಧ್ಯಕ್ಷರು.—ಅವರೂ ಬರುತ್ತಾರೆ.

ಶ್ರೀ ಜಿ. ವೆಂಕಟೇ ಗೌಡ.—ಮಕ್ಕಳಿಗೆ ಶಿಕ್ಷಣವನ್ನು ಕೊಡಿಸಲು ತರಬೇತಾದ ಉಪಾಧ್ಯಾಯರು ಸಿಕುತ್ತಿಲ್ಲ. ಹಳ್ಳಿಗಳಲ್ಲಿ ಅನೇಕ ಕಡೆ ನೋಡಿದ್ದೇನೆ. ಒಂದು ಶಾಲೆಯಲ್ಲಿ ಐದು ಕ್ಲಾಸ್‌ಗಳು ನಡೆಯುತ್ತಾ ಇರುತ್ತವೆ. ಒಬ್ಬ ಉಪಾಧ್ಯಾಯ ಒಂದು ಕೋಣೆಯಲ್ಲಿ ಈ ಐದು ಕ್ಲಾಸ್‌ಗಳನ್ನು ನಡೆಸುತ್ತಾ ಇರುತ್ತಾನೆ ಒಂದು ಕಡೆ ಅ. ಆ. ಎಂದು ಹೇಳಿ ಅಭ್ಯಾಸ ಮಾಡಿಸುತ್ತಿದ್ದರೆ ಮೇಲ್ ತರಗತಿಯಲ್ಲಿರುವ ಹುಡುಗರು ಅದನ್ನು ಏನು ವಿಷಯ ಎಂದು ನೋಡುತ್ತಾ ಇರುತ್ತಾರೆ. ಈ ರೀತಿ ಐದು ಕ್ಲಾಸುಗಳ ಮೇಲ್ವಿಚಾರಣೆ ಒಬ್ಬ ಉಪಾಧ್ಯಾಯ ಮಾಡಲಿಕ್ಕೆ ಸಾಧ್ಯವೇ? ನಿಜವಾಗಿಯೂ ಮಕ್ಕಳಿಗೆ ಶಿಕ್ಷಣ ಕೊಡುವುದಕ್ಕೆ ಅವನು ಜವಾಬ್ದಾರಿ ಹೊತ್ತುಕೊಂಡಿರುತ್ತಾನೆಯೇ ಎಂಬುದನ್ನು ವಿಚಾರ ಮಾಡಬೇಕು. ಸಾಧ್ಯವಾಗುವುದಿಲ್ಲ. ಎಷ್ಟು ಮಟ್ಟಿಗೆ ಸಾಧ್ಯವೋ ಅಷ್ಟು ಮಟ್ಟಿಗೆ ಕೆಲಸ ಕಾರ್ಯ ನಡೆಸಲಿಕ್ಕೆ ಪ್ರಯತ್ನ ಮಾಡಬೇಕೇ ಹೊರತು ಯಾವ ಒಂದು ಧೋರಣೆ ಇಟ್ಟುಕೊಂಡಿದ್ದೀರೋ ಆ ಪ್ರಕಾರ ಆಗಬೇಕೆನ್ನುವ ದೃಷ್ಟಿಯಿಂದ ಎಲ್ಲವನ್ನೂ ಮಾಡಬೇಕೆಂದು ಹೊರಟರೆ, ಆರ್ಥಿಕ ವ್ಯವಸ್ಥೆ ಆಗಬೇಕಾಗಿದೆ, ಸಲಕರಣೆಗಳು ಬೇಕಾಗಿವೆ ತರಬೇತಾದ ಉಪಾಧ್ಯಾಯರು ಬೇಕಾಗಿದ್ದಾರೆ. ಇವೊತ್ತಿನ ದಿವಸ 35 ಸಾವಿರ ಜನ ತರಬೇತು ಪಡೆದ ಉಪಾಧ್ಯಾಯರು ಇದ್ದಾರೆ. ಇನ್ನೂ 30 ಸಾವಿರ ಜನ ಬೇಕಾಗಿದೆ. ಶೇಕಡ 50ರಷ್ಟು ತರಬೇತು ಪಡೆಯದಂಥ ಉಪಾಧ್ಯಾಯರನ್ನು ಇಟ್ಟುಕೊಂಡು ಈ ಕೆಲಸ ಮಾಡಲಿಕ್ಕೆ ಸಾಧ್ಯವಿಲ್ಲ. ಎಷ್ಟು ಮಟ್ಟಿಗೆ ಸಮರ್ಪಕವಾಗಿ ಮಾಡಲು ಸಾಧ್ಯವೋ ಅಷ್ಟು ಮಾಡಬೇಕೇ ಹೊರತು ಎಲ್ಲವನ್ನೂ ಮಾಡುತ್ತೇವೆ ಎಂದು ಹೊರಟು ಆಭಾಸ ಮಾಡಿಕೊಂಡು ಚಿಕ್ಕ ಮಕ್ಕಳ ಭವಿಷ್ಯ ಹಾಳು ಮಾಡುವುದು ಸರ್ವಥಾ ನ್ಯಾಯವಲ್ಲ, ಇದನ್ನು ಒಪ್ಪಬಾರದು ಎಂದು ಸೂಚಿಸುತ್ತೇನೆ.

ಸ್ವಾಮಿ, ಇವೊತ್ತಿನ ದಿವಸ ತಮಗೆ ತಿಳಿಸಿದ ಹಾಗೆ ಮೇಲ್ವಿಚಾರಣೆ ಎನ್ನುವುದು ಸಮರ್ಪಕವಾಗಿ ನಡೆಯುತ್ತಿಲ್ಲ. ಇನ್ಸ್‌ಪೆಕ್ಟೊರೇಟ್ ಏನಿದೆ ಅವರು ಒಂದೊಂದು ಕಡೆ 100, 120, 150 ಸ್ಕೂಲುಗಳ ಮೇಲ್ವಿಚಾರಣೆ ಮಾಡತಕ್ಕ ಪರಿಸ್ಥಿತಿಯಲ್ಲಿದ್ದಾರೆ. ಹೀಗಿದ್ದರೆ ಇನ್ಸ್‌ಪೆಕ್ಟರು ಎಷ್ಟು ಮಟ್ಟಿಗೆ ಮೇಲ್ವಿಚಾರಣೆ ಮಾಡಲಿಕ್ಕೆ ಸಾಧ್ಯ ಎನ್ನುವುದನ್ನು ಯೋಚನೆ ಮಾಡಬೇಕು. ಪ್ರತಿಯೊಂದು ಜಿಲ್ಲೆಯಲ್ಲೂ ಅಸಿಸ್ಟೆಂಟ್ ಎಜ್ಯುಕೇಷನ್ ಆಫೀಸರು ಎಂದು ನೇಮಕ ಮಾಡಿದ್ದೀರಿ. ಅವರ ಕಾರ್ಯ, ಕರ್ತವ್ಯ, ಕೆಲಸ ಏನು ಎಂಬುದು ಗೊತ್ತಿಲ್ಲ. ಅವರಿಗೆ ಸ್ವತಂತ್ರವಾದ ಯಾವುದೂ ಅಧಿಕಾರವಿಲ್ಲ ಎಂದು ನನಗೆ ಗೊತ್ತಾಗಿದೆ. ಇಂಥಾ ಆಫೀಸರುಗಳಿಂದ ಏನು ಪ್ರಯೋಜನವಾಗುತ್ತದೆ? ಅದಕ್ಕೆ ಬದಲಾಗಿ ಕೊನೆಯಪಕ್ಷ ಒಬ್ಬ ಇನ್ಸ್‌ಪೆಕ್ಟರಿಗೆ 50 ಶಾಲೆಗಳ ಮೇಲ್ವಿಚಾರಣೆ ಮಾತ್ರ ಕೊಡಬೇಕು ಎಂದು ಈ ಸಂದರ್ಭದಲ್ಲಿ ತಿಳಿಸಬಿಚ್ಛಿಸುತ್ತೇನೆ.

ಸ್ವಾಮಿ, ಶಿಕ್ಷಣಕ್ಕೆ ಎಷ್ಟು ಪ್ರಾಶಸ್ತ್ಯ ಇದೆ ಎನ್ನುವುದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ. ಸುಮಾರು 18 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಖರ್ಚು ಮಾಡುತ್ತೇವೆ; ಎಷ್ಟು ಪ್ರತಿಫಲ ಸಿಕ್ಕಬೇಕೋ ಅಷ್ಟು ಸಿಕ್ಕುತ್ತಿಲ್ಲ ಎಂದು ವಿಷಾದ ಪಡಬೇಕಾಗಿದೆ. ಕಾರಣ ಇಷ್ಟೆ; ನಮ್ಮ ರಾಜ್ಯಾಂಗ ಶಾಸನದಲ್ಲಿ ಯಾವುದನ್ನು ಬಹಿಷ್ಕಾರ ಮಾಡಿದೆಯೋ ಅದನ್ನು ಕೆಲವು ಶಿಕ್ಷಣ ಕೇಂದ್ರಗಳವರು ಪ್ರೋತ್ಸಾಹಿಸುತ್ತ ಇದ್ದಾರೆ. ಇವೊತ್ತಿನ ದಿವಸ ಜಾತ್ಯತೀತ ರಾಷ್ಟ್ರದಲ್ಲಿ ವಾಸಮಾಡಬೇಕು, ಜಾತ್ಯತೀತ ರಾಷ್ಟ್ರ ಕಟ್ಟಬೇಕು, ಸಾರ್ವತ್ರಿಕ ರಂಗದಲ್ಲಿ ಜಾತೀಯತೆಗೆ ಮನ್ನಣೆ ಕೊಡಬಾರದು ಎಂದು ಇರುವಾಗ ಅದಕ್ಕೆ ವಿರುದ್ಧವಾಗಿ ಪ್ರೋತ್ಸಾಹ ಸಿಕ್ಕುತ್ತಿರುವುದನ್ನು ನೋಡಿದ್ದೇವೆ. ಅನೇಕ ವಿದ್ಯಾ ಸಂಸ್ಥೆಗಳು ಈ ದಿವಸ ಕೆಲಸ ಮಾಡುತ್ತಾ ಇವೆ. ಸಾರ್ವತ್ರಿಕ ಸಂಸ್ಥೆಗಳು ಸಾರ್ವತ್ರಿಕ ಎನ್ನುವ ಹೆಸರನ್ನು ದುರುಪಯೋಗಪಡಿಸಿಕೊಂಡು ಸರ್ಕಾರದ ಹಣವನ್ನು ಲೂಟಿಮಾಡತಕ್ಕ ಪರಿಸ್ಥಿತಿ ನಡೆಯುತ್ತಾ ಇದೆ. ಸರ್ಕಾರ ಕಣ್ಣುಮುಚ್ಚಿಕೊಂಡು ಅದಕ್ಕೆ ಉತ್ತೇಜನಕೊಡುತ್ತ ಇದೆ. ಸಾರ್ವತ್ರಿಕ ಎಂದು ಕರೆದು ನೂರು ಜನ ವಿದ್ಯಾಥಿಗಳಲ್ಲಿ 98 ಜನರನ್ನು ಯಾವ ಸಂಸ್ಥೆಯವರು ವಿದ್ಯಾರ್ಥಿನಿಲಯವನ್ನು ಪ್ರಾರಂಭ ಮಾಡಿದ್ದಾರೋ ಆ ಕೋಮಿಗೆ ಸೇರಿದವರನ್ನೇ ಇಟ್ಟುಕೊಂಡು ಇನ್ನಿಬ್ಬರು ಇತರ ಕೋಮಿಗೆ ಸೇರಿದವರನ್ನು ಸೇರಿಸಿಕೊಂಡು ಅದಕ್ಕೆ ಸಾರ್ವತ್ರಿಕ ಎಂದು. ಒಂದು ರೂಪುಕೊಟ್ಟು ಸರ್ಕಾರದ ಸಹಾಯ ಪಡೆದು ದುರುಪಯೋಗಪಡಿಸತಕ್ಕ ವ್ಯವಸ್ಥೆ ಈ ದಿವಸ ನಡೆಯುತ್ತ ಇದೆ. ಸರ್ಕಾರ ಇದಕ್ಕೆ ಪ್ರೋತ್ಸಾಹ ಕೊಟ್ಟು ಪರೋಕ್ಷವಾಗಿ ಜಾತೀಯತೆಯನ್ನು ಬೆಳಸತಕ್ಕ ವ್ಯವಸ್ಥೆ ಆಗುತ್ತಾ ಇದೆ ಎನ್ನುವುದನ್ನು ಸರ್ಕಾರದವರ ಗಮನಕ್ಕೆ ತರುತ್ತಾ ಇದ್ದೇನೆ. ಎಲ್ಲಾ ಕೋಮುಗಳಿಗೂ ಅವರವರ ಯೋಗ್ಯತೆಗನುಸಾರ ಎಷ್ಟು ಮಟ್ಟಿಗೆ ಹಿಂದುಳಿದಿದ್ದಾರೋ ಅದಕ್ಕನುಸಾರವಾಗಿ ಅವಕಾಶಗಳನ್ನು ಕಲ್ಪಿಸಿಕೊಟ್ಟಿರುವಾಗ ಈ ರೀತಿ ಸಾರ್ವತ್ರಿಕ ಹೆಸರಿನಲ್ಲಿ ದುರುಪಯೋಗವಾಗುತ್ತಿರುವುದನ್ನು ಗಮನಿಸದೆ ಸರ್ಕಾರ ಕಣ್ಣು ಮುಚ್ಚಿ ಕೊಂಡು ಸಹಾಯಕೊಡುತ್ತಾ ಇರುವುದು ನಿಜವಾಗಿಯೂ ಇದು ರಾಜ್ಯಾಂಗ ಶಾಸನಕ್ಕೆ ವಿರೋಧ ಎಂದು ಈ ಸಂದರ್ಭದಲ್ಲಿ ತಿಳಿಸುತ್ತಾ ಇದ್ದೇನೆ. ಆದ್ದರಿಂದ ಜಾತೀಯತೆಯ ಪ್ರಚೋದನೆ ಮಾಡತಕ್ಕ ಸಂಸ್ಥೆಗಳಿಗೆ ಪ್ರೋತ್ಸಾಹ ಕೊಡಬಾರದು. ಮತ್ತು ರೆಕಗ್ನಿಷನ್ ಕೂಡ ಕೊಡಬಾರದೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಅನೇಕ ವಿದ್ಯಾರ್ಥಿನಿಲಯಗಳು ಮೊನ್ನೆ 1962 ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ವಿದ್ಯಾರ್ಥಿನಿಲಯಗಳಲ್ಲಿದ್ದ ಶಾಲಾ, ಕಾಲೇಜುಗಳ ವಿದ್ಯಾರ್ಥಿಗಳನ್ನು ತಮ್ಮ ಪ್ರಚಾರ ಕಾರ್ಯಕ್ಕಾಗಿ ಉಪಯೋಗ ಮಾಡಿಕೊಂಡರಲ್ಲಾ ಅವರು ನಿಜವಾಗಿಯೂ ಶಿಕ್ಷಣಕ್ಕೆ ಮಹತ್ವವನ್ನು ಕೊಟ್ಟಿದ್ದಾರೆಯೇ ಎಂದು ಯೋಚನೆ ಮಾಡಬೇಕು. ಇಂಥ ದುರುಪಯೋಗವಾಗತಕ್ಕ ಕೆಲಸವನ್ನು ಖಂಡಿತ ಮಾಡಬಾರದು. ಇದಕ್ಕೆ ಸರ್ಕಾರ ಕಣ್ಣು

ಮುಚ್ಚಿಕೊಂಡು ಕುಳಿತಿದೆ. ಮತ್ತು ಅಂಥಾ ಸಂಸ್ಥೆಗಳಿಗೆ ಸಹಾಯಧನ ಕೊಡುತ್ತಾ ಇರುವುದು ಬಹಳ ಅನ್ಯಾಯ ಎಂದು ಹೇಳುತ್ತೇನೆ.

ಹೈಸ್ಕೂಲುಗಳು ಮತ್ತು ವಿಶ್ವ ವಿದ್ಯಾನಿಲಯ ಇವುಗಳೆಲ್ಲಾ ರಾಜಕೀಯದ ಬೀಡಾಗಿವೆ ಎಂದು ತಮಗೆಲ್ಲಾ ಗೊತ್ತಿದೆ. ಈ ದಿವಸ ಜಾತ್ಯತೀತವಾಗಬೇಕೆಂದು ಯಾರು ಅನ್ನುತ್ತಾರೆಯೋ, ಶಿಕ್ಷಣ ಪಡೆದ ಜನ ನಾವೇ ಅದಕ್ಕೆ ಅನುವಾಗಿದ್ದೇವೆ. ಇದು ಬಹಳ ಅನ್ಯಾಯ. ನಿಜವಾಗಿಯೂ ಇಂಥ ಅನ್ಯಾಯ ಎಲ್ಲೂ ಇಲ್ಲ. ಕಾಲೇಜುಗಳು ಮತ್ತು ಅಧಿಕಾರ ಯುತವಾದ ವಿದ್ಯಾಭ್ಯಾಸ ಇಲಾಖೆಯವರು ಈ ಜಾತೀಯತೆಯನ್ನು ಬೆಳೆಸುತ್ತಾ ಇರುವುದು ನಿಜವಾಗಿಯೂ ನಮ್ಮ ದೇಶದ ದುರ್ದೈವ ಎಂದು ಎನ್ನದೇ ವಿಧಿ ಇಲ್ಲ.

ಇದಕ್ಕೆ ಕಾರಣಗಳಿವೆ. ಮೇಲ್ವಿಚಾರಣೆ ಸರಿಯಾಗಿ ನಡೆಯುತ್ತಿಲ್ಲ, ಯಾರೂ ಜವಾಬ್ದಾರಿಯುತವಾಗಿ ಕರ್ತವ್ಯ ನಿಷ್ಠೆಯಿಂದ ಕೆಲಸ ಮಾಡುತ್ತಿಲ್ಲವೆಂದರೆ ತಪ್ಪಾಗುವುದಿಲ್ಲ. ನಮ್ಮ ಮೈಸೂರು ಜಿಲ್ಲೆಗೆ ಒಬ್ಬ ವಿದ್ಯಾಧಿಕಾರಿಗಳು ಬಂದಿದ್ದಾರೆ; ಅವರು ಬಂದ ಮೇಲೆ ಅಲ್ಲಿ ಎಲ್ಲವೂ ಕುಲಗೆಟ್ಟು ಹೋಗುತ್ತಿದೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ತಿಪಟೂರು ಮೂರು ಮೂರು ತಿಂಗಳಿಗೊಂದುಸಾರಿ ಸರ್ಕಾರ ಬದಲಾಯಿಸುತ್ತಿದ್ದರೆ ಅವರಿನ್ನೇನು ಮಾಡುವುದು? ಅವರು ಹೇಗೆ ಕೆಲಸ ಮಾಡುವುದು?

ಶ್ರೀ ಜಿ. ವೆಂಕಟೇ ಗೌಡ.—ಮಂತ್ರಿ ಮಂಡಲ ಬದಲಾಯಿಸಿದರೂ ಸರ್ಕಾರದ ಯಂತ್ರವಿರುತ್ತದೆ. ಈ ಯಂತ್ರ ಸರಿಯಾಗಿ ನಡೆಯುತ್ತಿಲ್ಲವೆಂದು ನನ್ನ ಆರೋಪಣೆ.

ಆ ವಿದ್ಯಾಧಿಕಾರಿ ಬಂದಮೇಲೆ ಮೈಸೂರು ಜಿಲ್ಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಕುಲಗೆಟ್ಟು ಹೋಗಿದೆಯೆನ್ನುವುದನ್ನು ಸಮರ್ಥನೆ ಮಾಡಲು ನಾನು ಸಿದ್ಧವಾಗಿದ್ದೇನೆ. ವಿಧವೆಗೆ ತಲೇಬೋಳಿಸಿದ ರೀತಿಯಾಗಿದೆ ಪ್ರಾಥಮಿಕ ವಿದ್ಯಾಭ್ಯಾಸ. ವರ್ಗದ ವಿಚಾರ ನೋಡಿದರೆ, ಮೂರು ತಿಂಗಳಿಗೊಮ್ಮೆ, ಆರು ತಿಂಗಳಿಗೊಮ್ಮೆ ನಡೆಯುತ್ತಾ ತಮಗೆ ಬೇಕಾದವರನ್ನು ಎಲ್ಲೆಲ್ಲಿ ಬೇಕೊ ಅಲ್ಲಲ್ಲಿಗೆ ಹಾಕಿಕೊಳ್ಳುವುದಾಗಿದೆ. ಎರಡು ವರ್ಷಕ್ಕೆ ಮುಂಚೆ ವರ್ಗ ಮಾಡಬೇಕಾದರೆ, ಮೇಲಧಿಕಾರಿಗಳ ಅನುಮತಿ ಪಡೆಯಬೇಕೆಂಬ ನಿಯಮವನ್ನೂ ಪಾಲಿಸುತ್ತಿಲ್ಲ ಇನ್ನೂ ಅನೇಕ ಲೋಪದೋಷಗಳಿವೆ. ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದರೂ ಸೂಕ್ತಕ್ರಮ ತೆಗೆದುಕೊಳ್ಳದಿರುವುದು ಪರೋಕ್ಷವಾಗಿ ಸರ್ಕಾರವೇ ಅವರಿಗೆ ಉತ್ತೇಜನ ಕೊಡುವಂತಿದೆ. ಇದನ್ನು ವಿಚಾರಿಸಿ, ಉಪ ಮಂತ್ರಿಗಳಾಗಿರುವವರು ಸರಿ ಪಡಿಸಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಎ. ಜೆ. ದೊಡ್ಡಮೇಟಿ—ಸ್ವಾಮಿ, ಈ ಮಹತ್ವದ ಬೇಡಿಕೆಯ ಬಗ್ಗೆ ನಾನು ಮಾತನಾಡುವ ಪ್ರಾರಂಭದಲ್ಲಿ ಅತ್ಯಂತ ಆಳವಾದ ವಿಷಾದದಿಂದ ಒಂದು ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಹಳ್ಳಿಗಳಲ್ಲಿ ಕಟ್ಟಲ್ಪಡತಕ್ಕ ಪ್ರಾಥಮಿಕ ಶಾಲಾ ಕಟ್ಟಡಗಳ ಬಗ್ಗೆ ಒಂದು ಸಾವಿರ ರೂಪಾಯಿ ಕೊಡುತ್ತೇವೆ, ಮಿಕ್ಕ ಹಣವನ್ನು ಅವರು ಕೊಟ್ಟರೆ ಹಳ್ಳಿಗಳ ಮಕ್ಕಳಿಗೆ ಶಾಲಾ ಕಟ್ಟಡ ಕೊಡುತ್ತೇವೆ ಎಂದು ಹೇಳುತ್ತಾರೆ. ನಾನು ಅನೇಕ ಸಾರಿ ಹೇಳಿದ್ದೇನೆ, ಈ ನೀತಿಯನ್ನು ಮುಂದುವರಿಸಿಕೊಂಡು ಹೋದರೆ ನಿಶ್ಚಯವಾಗಿಯೂ ಹಳ್ಳಿಗಳಲ್ಲಿ ಶಾಲೆಗಳಾಗುವುದಿಲ್ಲ. ನಾವು ಒಂದು ಸಾವಿರ ಕೊಡುತ್ತೇವೆ, ಮಿಕ್ಕದ್ದನ್ನು ನೀವೆ ಖರ್ಚುಮಾಡಿ ನಿಮ್ಮ ಕೈಯ್ಯಲ್ಲಾದರೆ ಕಟ್ಟಿಕೊಳ್ಳಿ, ಇಲ್ಲದಿದ್ದರೆ ಬಿಟ್ಟುಬಿಡಿ ಎಂದರೆ ಹೇಗಾಗುತ್ತದೆ? ಸರ್ಕಾರದವರು ಎಷ್ಟೋ ಖರ್ಚು ಮಾಡುತ್ತಾರೆ, ಅದರಲ್ಲಿ ಕಡಮೆ ಮಾಡಿ, ಇದಕ್ಕೆ ಖರ್ಚುಮಾಡಿ ಹಳ್ಳಿಗಳಲ್ಲಿ ಶಾಲಾ ಕಟ್ಟಡಕ್ಕೆ ಸರ್ಕಾರ ಕೊಡುವ ಹಣವನ್ನು ಸೇಕಡ 60ರಷ್ಟಾದರೂ ಮಾಡದಿದ್ದರೆ ಅತ್ಯಂತ ತಪ್ಪು ಅಥವಾ ಪಾಪ ಮಾಡಿದಂತಾಗುತ್ತದೆಂದು ಸ್ಪಷ್ಟವಾಗಿ ಹೇಳುತ್ತೇನೆ. ಹಳ್ಳಿಗಳಲ್ಲಿ ಇದರ ಪ್ರತಿಕ್ರಿಯೆ ಏನಾಗುತ್ತದೆಂದು ಗೊತ್ತಾಗುವುದಿಲ್ಲ.

ಶಿಕ್ಷಣ ಮಂತ್ರಿಗಳು ಹೊಸ ವಿಶ್ವವಿದ್ಯಾನಿಲಯದ ವಿಚಾರವಾಗಿ ಹೇಳಿದರು. ಇದು ಬೆಂಗಳೂರಿನಲ್ಲಿ ಸ್ಥಾಪನೆಯಾಗುತ್ತದೆಂದು ಹೇಳಿದರು. ಹೆಸರು Rural University ಎಂದು, ಆದರೆ ಸ್ಥಾಪನೆಯಾಗುವುದು ಬೆಂಗಳೂರಿನಲ್ಲಿ. ಎಲ್ಲ ವಿಷಯವೂ ಹೀಗೆಯೇ ನಡೆಯುತ್ತಿದೆ. ಗ್ರಾಮೋದ್ಯೋಗ ಸಂಸ್ಥೆಗಳಾಗಲಿ, ಮತ್ತೊಂದಾಗಲೀ ಹೆಸರು ಹಳ್ಳಿಗಳದು ಆಗುವುದು ನಗರದಲ್ಲಿ. ನಮ್ಮ ದೇಶದಲ್ಲಿ ನೂರಕ್ಕೆ 75 ಜನರು ಹಳ್ಳಿಗಳಲ್ಲಿದ್ದಾರೆ. ಪ್ರಾಥಮಿಕ, ಮಾಧ್ಯಮಿಕ ಮತ್ತು ಉಚ್ಚ ಶಿಕ್ಷಣ, ಕಾಲೇಜು ಶಿಕ್ಷಣ ಇವುಗಳನ್ನು ಹಳ್ಳಿಗಳಲ್ಲ ಎಷ್ಟು ಏರ್ಪಾಡು ಮಾಡಿದ್ದಾರೆ? ಹಳ್ಳಿಯಿಂದ ಒಬ್ಬನು ಬಂದು ನಗರದಲ್ಲಿ ವಿದ್ಯಾಭ್ಯಾಸ ಮಾಡಬೇಕಾದರೆ ಅವನ ಗತಿಯೇನು? ಹಳ್ಳಿಯವರು ಬೆಂಗಳೂರು, ಮೈಸೂರು, ಧಾರವಾಡ, ಮಂಗಳೂರು ಇಂಥ ನಗರಗಳಿಗೆ ಬಂದು ವಿದ್ಯೆ ಕಲಿಯಬೇಕಾದರೆ ತಿಂಗಳಿಗೆ 100 ರೂಪಾಯಿಗಿಂತ ಕಡಮೆಯಿಲ್ಲದೆ ಖರ್ಚುಮಾಡಬೇಕಾಗುತ್ತದೆ. ಅಲ್ಲದೆ ಹಳ್ಳಿಯಿಂದ ಬಂದ ಮಕ್ಕಳಿಗೆ ಕಾಲೇಜು ಶುಲ್ಕವನ್ನು ಯಾವ ರೀತಿ ವ್ಯತ್ಯಾಸ ಮಾಡುತ್ತಾರೆ? ಹಳ್ಳಿಗಾಡಿನ ಬಡ ರೈತರು ಮತ್ತು ಕೂಲಿಗಾರರ ಮಕ್ಕಳಿಗೆ ಒಳ್ಳೆಯ ಶಿಕ್ಷಣ ದೊರಕಬೇಕಾದರೆ ಯಾವ ಅನುಕೂಲ ಮಾಡಬೇಕೆಂದು ಯೋಚನೆ ಮಾಡಬೇಕು. ಒಟ್ಟಿನಲ್ಲಿ ಹಳ್ಳಿಗಾಡಿನಲ್ಲಿ ಶಿಕ್ಷಣ ಸಂಸ್ಥೆಗಳು ಬೆಳೆಯ ಬೇಕು;. ಹಳ್ಳಿಗಾಡಿನ ಮಧ್ಯೇ ಬೆಳೆಯುವಂತಾಗಬೇಕು. ಕಾಲೇಜಿಗೆ ಅನುಕೂಲತೆಗಳು ಬೇಕಾಗುತ್ತವೆ ಮತ್ತೊಂದು ಬೇಕಾಗುತ್ತದೆ ಎಂದು ಹೇಳಬಹುದು ಸರ್ಕಾರ. ಇಂದಲ್ಲ ಇನ್ನು ಐದು ವರ್ಷಕ್ಕಾದರೂ ಹಳ್ಳಿಗಾಡಿನ ಮಕ್ಕಳು ಒಳ್ಳೆಯ ಶಿಕ್ಷಣ ಪಡೆಯಬೇಕೆಂಬ ಧ್ಯೇಯ ಧೋರಣೆಗಳನ್ನಿಟ್ಟುಕೊಂಡು ಕೆಲಸ ಮಾಡಬೇಕು. ಶಿಕ್ಷಣದ ಬಗ್ಗೆ ಒಂದು ಸಮಗ್ರ ಕಲ್ಪನೆ ಹೊಂದಿ ಕೆಲಸ ಮಾಡಬೇಕ . ಶಿಕ್ಷಣವೆಂದರೆ, ಕೇವಲ ಐ. ಸಿ. ಎಸ್. ಅಧಿಕಾರಿಗಳು, ಡಾಕ್ಟರುಗಳು ಅಥವಾ ಬೇರೆ ದೊಡ್ಡ ಹುದ್ದೆಗಳಿಗೆ ಆರಿಸುವುದಕ್ಕಾಗಿ ಮಾತ್ರ ಕೊಡುವ ಶಿಕ್ಷಣವಲ್ಲ; ಅದಕ್ಕಿಂತ ಹೆಚ್ಚಿನದನ್ನು ಸಂಪಾದನೆ ಮಾಡುವುದನ್ನು ಶಿಕ್ಷಣದಲ್ಲಿ ಪಡೆಯಬೇಕು. ಇದು ಅನೇಕರಿಗೆ ಗೊತ್ತಿದೆ. ಇತ್ತೀಚೆಗೆ ಅನೇಕ ದೊಡ್ಡ ವ್ಯಕ್ತಿಗಳು Spirituality and Science ಜೊತೆಗೆ ಹೋಗಬೇಕೆಂದು ಹೇಳುತ್ತಿದ್ದಾರೆ. Spirituality ಎಂದರೆ ಹಿಂದೂ ಧರ್ಮವಲ್ಲ, ಮುಸ್ಲಿಂ ಧರ್ಮವಲ್ಲ, ಕ್ರಿಶ್ಚಿಯನ್ ಧರ್ಮವಲ್ಲ; ವಿಶಾಲವಾದ ತಳಹದಿಯ ಮೇಲೆ ಜ್ಞಾನ ಬೆಳೆಯಬೇಕು, ಸರ್ವವ್ಯಾಪಿಯಾಗಬೇಕು ಎಂಬುದು ಕಳೆದ ಐದು ವರ್ಷಗಳಲ್ಲಿ ಈ ವಿಚಾರವಾಗಿ ನಾಲ್ಕೈದು ಸಾರಿ ಹೇಳಿದ್ದೇನೆ, ಹಿಂದಿನ ಮತ್ತು ಇಂದಿನ ಮಂತ್ರಿಗಳಿಗೂ ತಿಳಿಸಿದ್ದೇನೆ. ಪ್ರಪ್ರಥಮವಾಗಿ ಒಂದೊಂದು ಜಿಲ್ಲೆಗೆ ಒಂದೊಂದರಂತೆ Residential High School ತೆರೆಯಿರಿ ಎಂದು ಹೇಳಿದ್ದೇನೆ. ರಾಮಕೃಷ್ಣಾಶ್ರಮದವರು ಹೇಗೆ ಮಾಡಿದ್ದಾರೋ

(ಶ್ರೀ ಎ. ಜೆ. ದೊಡ್ಡಮೇಟಿ)

ಹಾಗೆ ಮಾಡಬೇಕು. ಎರಡು ವರ್ಷಗಳ ಕೆಳಗೆ ಅವರು ಹೀಗೆ ಹೇಳಿದ್ದಾರೆ, "ಅವರ ಮನಸ್ಸಿನಲ್ಲಿರುವುದೇನು ಎಂಬುದನ್ನು ಅವರಿಂದ ತಿಳಿದು ಹೇಳಿ" ಎಂದು ಅವರ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದ್ದರು. ಅವರು ಬಂದು ನನ್ನ ಯೋಜನೆ ಏನೆಂದು ನನ್ನನ್ನು ಕೇಳಿದರು. ಹೀಗೆಮಾಡಿ ಎಂದು ನಾನು ಅವರಲ್ಲಿ ಹೇಳಿದೆ ಅನಂತರ ಏನಾಯಿತೋ ಗೊತ್ತಿಲ್ಲ. ಒಂದು ಭದ್ರವಾದ, ಸುರಕ್ಷಿತವಾದ ತಳಹದಿಯ ಮೇಲೆ ಶಿಕ್ಷಣ ಸಂಸ್ಥೆಯನ್ನು ವ್ಯವಸ್ಥೆ ಮಾಡಬೇಕು. ಶಿಕ್ಷಣಕ್ಕೆ ಒಂದು ಭದ್ರವಾದ ಬುನಾದಿ ಬೇಕಾದರೆ ದೂರ ದೃಷ್ಟಿಬೇಕು. ಒಳ್ಳೆಯ ತಳಹದಿಯ ಮೇಲೆ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭ ಮಾಡಬೇಕು. ಅಗಲೇ residential school ಏನೆಂಬುದನ್ನು ವಿಸ್ತಾರವಾಗಿ ಹೇಳಿದ್ದೇನೆ, ಈಗ ಹೆಚ್ಚು ಹೇಳಲು ಕಾಲಾವಕಾಶವಿಲ್ಲ. ಸಾಮಾನ್ಯವಾಗಿ ರಾಮಕೃಷ್ಣಾಶ್ರಮದವರು ಏನು ಮಾಡಿದ್ದಾರೋ ಆ ರೀತಿಯ ಸಂಸ್ಥೆಯನ್ನು ಮಾಡಬೇಕು. ಮುಂದೆ ಕಾಲೇಜಿನಲ್ಲಿಯೂ ಅದೇ ರೀತಿ ವ್ಯವಸ್ಥೆ ಮಾಡಲು ಆಗುತ್ತದೆ.

ಪ್ರಾಥಮಿಕ ಶಾಲೆಗಳ ಕಟ್ಟಡಗಳ ವಿಚಾರವನ್ನು ಹೇಳಿದ್ದೇನೆ. ಇನ್ನು ಅವುಗಳ ಆಡಳಿತ ಕೂಡ ಜಿಲ್ಲಾ ಮಟ್ಟದಲ್ಲಿ ನಡೆಯಬೇಕೋ, ರಾಜ್ಯ ಮಟ್ಟದಲ್ಲಿ ನಡೆಯಬೇಕೋ, ತಾಲ್ಲೂಕು ಮಟದಲ್ಲಿ ನಡೆಯಬೇಕೋ ಇನ್ನೂ ಸ್ಪಷ್ಟವಾಗಿ ಗೊತ್ತಾಗಿಲ್ಲ. ಕಾನೂನೇನೋ ಹಿಂದಿನ ಸರ್ಕಾರದವರೆ ಮಾಡಿದ್ದಾರೆ; ಇನ್ನೂ ಅಖೈರಾಗಿ ತೀರ್ಮಾನವಾಗಿಲ್ಲ. ತಾಲ್ಲೂಕು ಬೋರ್ಡಿಗೆ ಬರಬೇಕು ಅಥವಾ ಜಿಲ್ಲಾ ಬೋರ್ಡಿಗೆ ಬರಬೇಕು ಅಥವಾ ಸರ್ಕಾರಕ್ಕೆ ಬರಬೇಕು ಎಂದು ನಾನು ಹೇಳುವುದಿಲ್ಲ. ಏನಾದರೂ ಮಾಡಲಿ, ನಿರ್ಣಯ ತೆಗೆದುಕೊಂಡರೆ ಸರಿ ಒಪ್ಪುತ್ತೇವೆ. ಈ ಪ್ರಶ್ನೆಯನ್ನು ಮುಂದೆ ಹಾಕುತ್ತಾ ಹೋಗಬಾರದು. ಇದು ಗಣಪತಿಯ ಮದುವೆಯಂತಾಗಿದೆ. ಎಂದು ಮುಹೂರ್ತ ಬರುತ್ತದೋ ಗೊತ್ತಿಲ್ಲ. ಯಾರ ಕಡೆ ಕೊಡಲು ಮನಸ್ಸಿದೆಯೋ ಅವರಿಗೆ ಕೊಟ್ಟು ಬಿಡಲಿ, ಇಲ್ಲದಿದ್ದರೆ ತಲೆ ನೋವಿರುತ್ತದೆ. ಆಸಕ್ತ ಹಿತಗಳು ಬೇರೆ ಬೇರೆಯಾಗಿ ಹೇಳುತ್ತವೆ. ಆದಕಾರಣ ಕೊನೆಯ ತೀರ್ಮಾನವನ್ನು ಸರ್ಕಾರ ಬೇಗ ಮಾಡಲೆಂದು ಹೇಳುತ್ತೇನೆ.

4-00 P.M.

ಆಮೇಲೆ ಜಾತೀಯತೆಯ ವಿಚಾರ ಕೆಲವರು ಹೇಳಿದ್ದಾರೆ. ಆ ವಿಷಯವನ್ನು ಹೇಳಲು ನಾನು ಸರಿಯಾಗಿ ಅಭ್ಯಾಸ ಮಾಡಿಲ್ಲ. ನಮ್ಮ ದೇಶದಲ್ಲಿ ಜಾತಿಗಳಿಗೆ ಸಂಬಂಧಪಟ್ಟ ಕೆಲವು ಸಂಸ್ಥೆಗಳಿವೆ, ಇಲ್ಲವೆಂದು ಹೇಳುವುದಿಲ್ಲ. ಆದರೆ ಅವರ ಹಿಂದೆ ಪ್ರಾಮಾಣಿಕತನವಿಲ್ಲ. ಕೆಲವು ಜಾತಿಯವರು ತಮ್ಮ ಹಿತವನ್ನು ಸಾಧಿಸಿಕೊಂಡಿದ್ದಾರೆ. ಬೆಳ್ಳಿ ಕಟ್ಟಿನ ಲಿಂಗಾಯಿತರು, ಬೆಳ್ಳಿಕಟ್ಟಿನ ಒಕ್ಕಲಗರು-ಹೀಗೆ ಕೆಲವರು ತಮ್ಮ ಹಿತರಕ್ಷಣೆ ಮಾಡಿಕೊಂಡಿದ್ದಾರೆ, ತಮ್ಮ ಕೆಲವು ಜನರ ಸಲುವಾಗಿ ಶಕ್ತಿಯನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆಯೇ ಹೊರತು ಜಾತೀಯತೆ ನಿಜವಾಗಿಯೂ ಇಲ್ಲ. ಜಾತೀಯತೆ ಶಿಕ್ಷಣದಲ್ಲಿ ಹೋಗಬೇಕಾದರೆ ಕೆಲವು ಮಾರ್ಪಾಡು ಮಾಡಬೇಕು. ಮೊದಲೇ ಇದಕ್ಕೆ ವ್ಯವಸ್ಥೆ ಮಾಡಬೇಕಾಗಿತ್ತು.

ಇನ್ನು ಆಡಳಿತಸೂತ್ರ ಸರಿಯಾಗಿಲ್ಲವೆಂಬುದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. 15 ದಿವಸಗಳ ಹಿಂದೆ ಧಾರವಾಡ ಜಿಲ್ಲೆ ಗಜೇಂದ್ರಗಡ ಹೈಸ್ಕೂಲಿನಿಂದ ಒಂದು ಕಾಗದ ಬಂತು. ಅಲ್ಲಿ ಮಾಧ್ಯಮಿಕ ಶಾಲೆ ಷುರು ಮಾಡುವುದಕ್ಕೆ ಡೈರೆಕ್ಟರ ಪರ್ಮಿಷನ್ ಸಲುವಾಗಿ ಅರ್ಜಿಮಾಡಿ ನಾಲ್ಕು ತಿಂಗಳಾಯಿತು, ಏನಾಯಿತೋ ಏನೋ ಕಾಗದ ಈಚೆಗೆ ಬಂದಿಲ್ಲ; ವಿಚಾರಮಾಡಿ ಎಂದು ತಿಳಿಸಿದರು. ನಾನು ಒಂದು ಕಾಗದಬರೆದೆ, ಅದನ್ನು ಹೈಸ್ಕೂಲಿಗೆ ಸಂಬಂಧಪಟ್ಟ ಜಾಯಿಂಟ್ ಡೈರೆಕ್ಟರಿಗೆ ಮುದ್ದಾಂ ಒಬ್ಬರ ಕೈಯಲ್ಲಿ ಕಳುಹಿಸಿದೆ. ಎಂಟು ದಿವಸಗಳ ಮೇಲೆ ಸರ್ಕಾರಕ್ಕೆ ಕಾಗದ ಯಾವುದೂ ಬಂದಿಲ್ಲ ಎಂದು ಟೆಲಿಗ್ರಾಂ ಬಂತು. ಮತ್ತೆ ನೋಡಿ ಹೇಳುವುದಾಗಿ ತಿಳಿಸಿದರು. ಆಮೇಲೆ ಫೋನ್ ಮಾಡಿದಾಗ ಕಾಗದ ಕಳೆದು ಹೋಗಿದೆ, ಇನ್ನೊಂದು ಕಾಗದ ಕಳುಹಿಸಿ ಎಂದು ತಿಳಿಸಿದರು. ಇದಕ್ಕಿಂತ ಭಯಾನಕಸ್ಥಿತಿ ಬೇರೆ ಇದೆಯೇ? ಇದಕ್ಕಿಂತ ಕ್ರೂರವಾದ ಸ್ಥಿತಿ ಮತ್ತು ಬೇಜವಾಬ್ದಾರಿಯುತವಾದದ್ದು ಯಾವುದಿದೆ? ಈ ದೃಷ್ಟಿಯಿಂದ ನೀವು ಪರಿಶೀಲಿಸಬೇಕು. ಇದಕ್ಕೆ ಯಾರು ಕಾರಣರು, ಕಾಗದ ಏಕೆ ಹೋಯಿತು ಎಂದು ವಿಚಾರಮಾಡಿ, ಯಾರು ತಪ್ಪಿತಸ್ಥರೋ ಅವರ ಮೇಲೆ ಮೂರು ದಿವಸಗಳೊಳಗೆ ಕ್ರಮ ತೆಗೆದುಕೊಂಡು ತಪ್ಪು ಶೋಧನೆ ಮಾಡಬೇಕು. ಒಮ್ಮೆ ಹೀಗೆ ಮಾಡಿದರೆ ಬಿಗಿ ಬರುತ್ತದೆ. ಇಂಥ ನಿದರ್ಶನಗಳು ಅನೇಕವಾಗಿರಬಹುದು.

ಕಾಲೇಜು ಫೀ ಸಲುವಾಗಿ ಈಗಾಗಲೆ ಹೇಳಿದ್ದೇನೆ. ಮೆಡಿಕಲ್ ಕಾಲೇಜಿನ ವಿಚಾರವನ್ನು ಸ್ವಲ್ಪ ಹೇಳುತ್ತೇನೆ. ಶ್ರೀಮಂತರಿಗೆ ಮಾತ್ರ ಮೆಡಿಕಲ್ ಕಾಲೇಜು ಮೀಸಲಾಗಿದೆಯೆ? ಒಂಬತ್ತು, ಹತ್ತು ಸಾವಿರ ರೂಪಾಯಿಗಳ ಸಾಮಾನು ಸ್ಟಾಕ್ ಇಡಬೇಕೆಂದರೆ ಯಾರಿಗೆ ತೆಗೆಯಲು ಸಾಧ್ಯ, ಸರ್ಕಾರದ ಸಹಾಯದಿಂದ ಕಾಲೇಜು ನಡೆಸಲುಬೇಕು ಎಂಬ ವಾದವಿದೆ. ಇದನ್ನು ಬಗೆಹರಿಸಲು ಸಂಬಂಧಪಟ್ಟವರನ್ನು ಕರೆಸಿ, ವಿಚಾರಮಾಡಿ ಅವರ ಕಷ್ಟವೇನು ಎಂದು ತಿಳಿದು ನಿಜವಾಗಿಯೂ ಅವರಿಗೆ ನಷ್ಟವಾಗುತ್ತಿದ್ದರೆ ಏನು ಸಹಾಯಬೇಕೋ ಅದನ್ನು ಅವರಿಗೆ ಕೊಡಿ. ಇಲ್ಲದಿದ್ದರೆ ದೇಶದ ಹಿತದೃಷ್ಟಿಯಿಂದ ಇಷ್ಟು ತೆಗೆದುಕೊಳ್ಳಬಾರದು, ಈರೀತಿಮಾಡಿ ಎಂದು ಧೈರ್ಯವಾಗಿ ಒಂದು ಮಾತು ಹೇಳಿ. ಜಗತ್ತಿನಲ್ಲಿ ಎಲ್ಲರನ್ನೂ ತೃಪ್ತಿಪಡಿಸುವುದಕ್ಕಾಗುವುದಿಲ್ಲ. ಬಹಳ ದಿವಸ ಶ್ರೀಮಂತ ವರ್ಗದ ಮೇಲೆ ಆಶ್ರಯಿಸಿದರೆ ನಾಶವಾಗುತ್ತಾರೆ. ಈ ದಿವಸ ಕಾಂಗ್ರೆಸ್ ಅಥವಾ ಕಮ್ಯೂನಿಸ್ಟರಿಗೆ ಮಾತ್ರ ಅವಕಾಶವಿದೆ, ಮತ್ತೊಂದು ಪಕ್ಷ ಅಧಿಕಾರಕ್ಕೆ ಬರುವುದಿಲ್ಲ. ಪಿ.ಎಸ್.ಪಿ. ಮತ್ತು ಕಾಂಗ್ರೆಸ್ಸಿಗೆ ಬಹಳ ವ್ಯತ್ಯಾಸವಿಲ್ಲ. ಈ ದೃಷ್ಟಿಯಿಂದ ನಾನು ವಿಚಾರಮಾಡಿ ನೋಡಿದರೆ ಕಾಂಗ್ರೆಸ್ ಬಿಟ್ಟು ಕೆಲವರು ಹೋಗಿರುವುದು ದುರ್ದೈವ.

ರಾಮರಾಜ್ಯ ಕಟ್ಟಿ ಎಂದು ಕೆಲವರು ಹೇಳುತ್ತಾರೆ. ಅದು ಖಂಡಿತ ಬೇಡ. ಈಗ ಪ್ರಜಾಪ್ರಭುತ್ವವಿದೆ. ಯಾರಾದರೂ ಒಬ್ಬರ ಮಾತನ್ನು ಕೇಳಿ ಇತರರ ತಲೆ ಯೊಡೆಯುವುದು ಬೇಡ. ಪ್ರಜಾರಾಜ್ಯ, ಜನತಾ ರಾಜ್ಯ ನಿರ್ಮಾಣವಾಗಬೇಕಾಗಿದೆ. ರಾಮರಾಜ್ಯ ಆದರ್ಶ ರಾಜ್ಯವಾಗಿರಬಹುದು. ಆದರೆ ಈಗ ರಾಮನ ಕಾಲಕ್ಕಿಂತ ಎಷ್ಟೋ ಮುಂದುವರಿದಿದ್ದೇವೆ. ಐದು ಲಕ್ಷ ವರ್ಷಗಳ ಹಿಂದಿನದನ್ನು ಅನುಸರಿಸುವುದು ಬೇಡ. ಜನತಾ ರಾಜ್ಯವು ಪ್ರಜಾ ಪ್ರಭುತ್ವದಲ್ಲಿ ಆಧ್ಯಾತ್ಮಿಕ ತಳಹದಿಯ ಮೇಲೆ ನಿರ್ಮಾಣವಾಗಿ ಸಮತಾವಾದವನ್ನು ಜಾರಿಗೆ ತರಲು ತಕ್ಕ ಕಾರ್ಯಕ್ರಮ ಕೈಕೊಳ್ಳಲ್ಪಡಬೇಕು. ಇದಕ್ಕೆ ಪ್ರಥಮವಾಗಿ ರೆಸಿಡೆನ್ಷಿಯಲ್ ಹೈಸ್ಕೂಲನ್ನು ಪ್ರಾರಂಭಿಸಿ ನಾನ್

ಕಮ್ಯೂನಲ್ ಬೇಸಿಸ್‌ಮೇಲೆ ಆಧ್ಯಾತ್ಮಿಕ ಬೆಳೆಸಬೇಕು. ಬಡತನ, ನಿರುದ್ಯೋಗ ಹೋಗಬೇಕಾದರೆ ಜಾತೀಯತೆ ತೊಲಗಬೇಕು. ಮಂತ್ರ ಹಾಕಿದರೆ ಅದು ಹೋಗುವುದಿಲ್ಲ. ಅದಕ್ಕೆ ತಕ್ಕ ಶಿಕ್ಷಣ, ಸಮಾಜದ ನಿರ್ಮಾಣ ಆಗಬೇಕು. ಈ ದೃಷ್ಟಿಯಿಂದ ಪರಿಶೀಲಿಸಿ ಬಹಳ ಬುದ್ಧಿವಂತಿಕೆಯಿಂದ, ದಿಟ್ಟತನದಿಂದ ಸಮಾಜದಲ್ಲಿ ಸರಿಯಾದ ವ್ಯವಸ್ಥೆಮಾಡಿ ಕ್ರಾಂತಿಯನ್ನು ತಡೆಯದಿದ್ದರೆ ಈ ದೇಶ ಕಮ್ಯೂನಿಸ್ಟರ ವಶವಾಗುತ್ತದೆ.

†ಶ್ರೀ ಜಿ. ಟಿ. ರಂಗಪ್ಪ (ಹೊಸದುರ್ಗ).—ಅಧ್ಯಕ್ಷರೆ, ಈ ದಿವಸ ವಿದ್ಯಾಭ್ಯಾಸದ ಡಿಮ್ಯಾಂಡಿನ ಮೇಲೆ ಮಾತನಾಡುತ್ತಾ ಈಗಾಗಲೆ ಅನೇಕ ಸದಸ್ಯರು ಈಬಗ್ಗೆ ಅನೇಕ ಸಲಹೆಗಳನ್ನು ಸಭೆಯ ಅವಗಾಹನೆಗೆ ತಂದಿದ್ದಾರೆ, ಆದರೂ ಕೂಡ ಈ ಸಂಬಂದದಲ್ಲಿ, ಈ ವಿಷಯದಲ್ಲಿ ಎರಡು ಮಾತುಗಳನ್ನಾಡಬೇಕಾಗಿದೆ ಎಂದು ತಿಳಿಸಲಿಚ್ಛಿಸುತ್ತೇನೆ.

ಈಗ ಸರ್ಕಾರ ಜಾರಿಗೆ ತಂದಿರುವ ಕಡ್ಡಾಯ ಶಿಕ್ಷಣ ಕಾರ್ಯತಃ ಯಶಸ್ವಿಯಾಗಿ ನಡೆಯುತ್ತಿಲ್ಲ. ಕಾರಣ ಪ್ರತಿಯೊಂದು ಹಳ್ಳಿಯಲ್ಲೂ ಕೂಡ ವಿದ್ಯಾರ್ಥಿಗಳಿಗೆ ಕೂಡುವುದಕ್ಕೆ ಸ್ಥಳಾವಕಾಶವಿಲ್ಲದೆ ಬಹಳ ತೊಂದರೆಯಾಗಿದೆ. ಅಲ್ಲದೆ ಇರುವ ಕಟ್ಟಡಗಳಲ್ಲಿ ಹುಡುಗರಿಗೆ ಸಾಕಾದಷ್ಟು ಸ್ಥಳವಿಲ್ಲದೆ ಅವರು ಹೊರಗೆ ಕುಳಿತುಕೊಳ್ಳುತ್ತಿದ್ದಾರೆ. ಕಡ್ಡಾಯ ಶಿಕ್ಷಣ ಜಾರಿಗೆ ಬರುವುದಕ್ಕೆ ಮುಂಚೆ ಪ್ರತಿ ಹಳ್ಳಿಯಲ್ಲೂ ಸ್ಕೂಲು ಕಟ್ಟಡಕ್ಕೆ ವ್ಯವಸ್ಥೆಮಾಡಿ ಅನಂತರ ಜಾರಿಗೆ ತಂದಿದ್ದರೆ ಬಹಳ ಚೆನ್ನಾಗಿತ್ತು. ಈಗಲಾದರೂ ಸರ್ಕಾರ ಈ ವಿಷಯದಲ್ಲಿ ಹೆಚ್ಚಿನ ಶ್ರದ್ಧೆ ವಹಿಸಿ ಕಡ್ಡಾಯ ಶಿಕ್ಷಣ ಯಶಸ್ವಿಯಾಗಲು ಹಳ್ಳಿಗಳಲ್ಲಿ ಶಾಲಾ ಕಟ್ಟಡದ ವ್ಯವಸ್ಥೆಯನ್ನು ಸಮರ್ಪಕವಾಗಿ ಮಾಡಬೇಕೆಂದು ಹೇಳಲಿಚ್ಛಿಸುತ್ತೇನೆ.

ಇನ್ನೊಂದು ವಿಷಯವೇನೆಂದರೆ ಪಠ್ಯಪುಸ್ತಕಗಳು ಸಕಾಲದಲ್ಲಿ ಸಿಕ್ಕದೆ ಪೋಷಕರಿಗೂ ವಿದ್ಯಾರ್ಥಿಗಳಿಗೂ ಬಹಳ ನಿರುತ್ಸಾಹವುಂಟಾಗಿ ವಿದ್ಯಾಭ್ಯಾಸಕ್ಕೆ ಬಹಳ ಧಕ್ಕೆಯಾಗುತ್ತಿದೆ. ಈ ತೊಂದರೆ ಪ್ರತಿ ವರ್ಷವೂ ಪ್ರತಿ ಶಾಲೆಯಲ್ಲೂ ಇದೆ. ಇದನ್ನು ಸರ್ಕಾರದವರು ಕೂಲಂಕಷವಾಗಿ ವಿಮರ್ಶೆಮಾಡಿ ಆದಷ್ಟು ಬೇಗ ಪ್ರತಿಯೊಂದು ಊರಿನಲ್ಲೂ ಸಕಾಲದಲ್ಲಿ ಪಠ್ಯಪುಸ್ತಕಗಳು ಸಿಕ್ಕುವ ಹಾಗೆ ವ್ಯವಸ್ಥೆಮಾಡಿ ಇದರ ರೋಗವನ್ನು ನಿವಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದೇನೆಂದರೆ, ಉಪಾಧ್ಯಾಯರುಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಯಾವ ಆರೋಪಣೆಯೂ ಇಲ್ಲದೆ ವರ್ಗ ಮಾಡುವ ಚಾಳಿ ಈ ಇಲಾಖೆಯಲ್ಲಿ ಬಂದಿದೆ. ಉದಾಹರಣೆಗೆ, ನಮ್ಮ ಹೊಸದುರ್ಗ ತಾಲ್ಲೂಕಿನಲ್ಲಿ ಅನೇಕ ಜನ ಪ್ರೈಮರಿ ಸ್ಕೂಲ್ ಉಪಾಧ್ಯಾಯರುಗಳನ್ನು ಯಾವ ಕಾರಣವೂ ಇಲ್ಲದೆ ವರ್ಗಮಾಡುವುದರಲ್ಲಿ ದೊಡ್ಡ ಅಧಿಕಾರಿಗಳೊಬ್ಬರು ಕೈ ಹಾಕಿರುವುದು ತುಂಬಾ ವಿಷಾದಕರ ಮತ್ತು ಶೋಚನೀಯ.

ಶ್ರೀ ಎಸ್. ಆರ್. ಕಂಠಿ.—ಮೂರು ವರ್ಷ ಆಗಿರಬೇಕು.

ಶ್ರೀ ಜಿ. ಟಿ. ರಂಗಪ್ಪ.—ಮೂರು ವರ್ಷವಾಗಿಲ್ಲ. ಎಷ್ಟೋ ಜನ ಒಂದು ವರ್ಷ ಕೂಡ ಅಲ್ಲಿ ಸರ್ವಿಸ್ ಆಗದಿರುವವರನ್ನು ಯಾವುದೊಂದು allegation ಕೂಡ ಅವರ ಮೇಲಿಲ್ಲದೆ ವರ್ಗಮಾಡಿಬಿಟ್ಟಿದ್ದಾರೆ. ಇಂಥ ತೊಂದರೆಗಳನ್ನು ತಪ್ಪಿಸಬೇಕು. ಇಲ್ಲದಿದ್ದರೆ ಇದರಿಂದಾಗುವ ದುಷ್ಪರಿಣಾಮವೇನೆಂದರೆ ವರ್ಗವಾಗಿರತಕ್ಕ ಉಪಾಧ್ಯಾಯರುಗಳಿಗೆ ಸ್ಕೂಲು ಹುಡುಗರ ವಿಷಯದಲ್ಲಿ ಹೆಚ್ಚಿನ ಮಮತೆಯಿಂದ ಕೆಲಸ ಮಾಡಲು ಆಸೆಯಿಲ್ಲದೆ ಹೋಗಿ ಬೇಜವಾಬ್ದಾರಿಯಿಂದ ಕಾಲ ಹಾಕುತ್ತಿರುತ್ತಾರೆ. ಇದರಿಂದಾಗಿ ಒಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಸರ್ಕಾರದವರಿಗೆ ಇದು ಯಶಸ್ಸು ತರತಕ್ಕುದಲ್ಲ. ಆದ್ದರಿಂದ ಈಗ ಮಾಡಿರತಕ್ಕ ವರ್ಗಾವರ್ಗಿಗಳನ್ನು ಪುನರ್ವಿಮರ್ಶೆಮಾಡಿ, ಈ ಉಪಾಧ್ಯಾಯರುಗಳನ್ನು ಆಯಾ ಸ್ಥಳಗಳಲ್ಲಿಯೇ ಇರುವಂತೆ ಮಾಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ವಿದ್ಯಾರ್ಥಿಗಳಿಗೆ ಸ್ಕಾಲರ್ ಷಿಪ್ಪುಗಳನ್ನು ಕೊಡುವ ವಿಚಾರವಾಗಿ ಹೇಳುವುದಾದರೆ, ಈಗ ನೀವು ಕೊಡುತ್ತಿರತಕ್ಕ ಸ್ಕಾಲರ್‌ಷಿಪ್ಪು ಎಲ್ಲಾ ಬಡ ವಿದ್ಯಾರ್ಥಿಗಳಿಗೂ ಸಿಕ್ಕುತ್ತಿಲ್ಲ. ಹಾಗೂ ಸಕಾಲದಲ್ಲಿ ದೊರೆಯುತ್ತಿಲ್ಲ. ಆದ್ದರಿಂದ ಸ್ಕಾಲರ್‌ಷಿಪ್ಪುಗಳ ಸಂಖ್ಯೆಯನ್ನು ಜಾಸ್ತಿಮಾಡಬೇಕಲ್ಲದೆ, ಸಕಾಲದಲ್ಲಿ ಕೊಡಬೇಕೆಂದೂ ನಾನು ಹೇಳುತ್ತೇನೆ.

ಆಮೇಲೆ, ಹಳ್ಳಿಯಲ್ಲಿರತಕ್ಕ ಶಾಲಾ ವಿದ್ಯಾರ್ಥಿಗಳಿಗೆ Mid-day-meals ವ್ಯವಸ್ಥೆ ಎಲ್ಲಾ ಕಡೆಗಳಲ್ಲೂ ಸಮರ್ಪಕವಾಗಿ ನಡೆಯುತ್ತಿಲ್ಲ. ಪ್ರತಿಯೊಂದು ಹಳ್ಳಿಯಲ್ಲಿಯೂ ಇಂಥ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತು, ನಮ್ಮ ವಿದ್ಯಾಭ್ಯಾಸ ಕ್ರಮದಲ್ಲೂ ಬದಲಾವಣೆಗಳಾಗಬೇಕು. ಈಗಿನಂತೆ ಪ್ರತಿಯೊಬ್ಬ ವಿದ್ಯಾರ್ಥಿಯೂ ನೌಕರಿಯನ್ನೇ ಜೀವನದ ಆಧಾರವಾಗಿಟ್ಟುಕೊಂಡಿರುವುದನ್ನು ಬಿಟ್ಟು ಸ್ವಾವಲಂಬಿಯಾಗಿ ಜೀವನ ನಡೆಸುವುದಕ್ಕೆ ಸಹಕಾರಿಯಾಗಿರುವ ರೀತಿಯ ವಿದ್ಯಾಭ್ಯಾಸವನ್ನು ಕೊಡುವ ಟೆಕ್ನಿಕಲ್ ಸ್ಕೂಲ್ ಮತ್ತು ಕೈಗಾರಿಕಾ ಶಾಲೆಗಳನ್ನು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ತೆರೆಯಬೇಕೆಂದು ನಾನು ಹೇಳುತ್ತೇನೆ.

Examinations ಗಳನ್ನು ಪ್ರಸ್ತಾಪ ಮಾಡುತ್ತಾ, ಈಗ ಪರೀಕ್ಷೆಗಳಲ್ಲಿ Re-totalling ಗಿಗೆ ಅವಕಾಶವಿರುವಂತೆ Re-valuationನ್ನಿಗೂ ಅವಕಾಶ ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ.

ವಿಶ್ವವಿದ್ಯಾನಿಲಯದಲ್ಲಿ ಈಗ ಒಂದು ಕಮಿಟಿಯನ್ನು ಏರ್ಪಡಿಸಿದ್ದಾರೆ. ಆದರ ವ್ಯವಸ್ಥೆಯನ್ನು ನೋಡಿದರೆ ವಿಷಾದವಾಗುತ್ತದೆ—ಎಲ್ಲಾ ಜನಾಂಗದವರಿಗೂ ಅದರಲ್ಲಿ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಸ್. ಆರ್. ಕಂಠಿ.—ಅದು ಯಾವ ಕಮಿಟಿ ?

ಶ್ರೀ ಜಿ. ಟಿ. ರಂಗಪ್ಪ.—ಈ ಬೆಳಗ್ಗೆ ತಾವು ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಸಂಬಂಧಪಟ್ಟ ಒಂದು ಕಮಿಟಿಯನ್ನು ರಚಿಸಿರುವುದಾಗಿ ಹೇಳಿಕೆಯಿತ್ತಿರಲ್ಲಾ ಅದು.

ಶ್ರೀ ಎಸ್. ಆರ್. ಕಂಠಿ.—ಅದರಲ್ಲಿ ಬೆಂಗಳೂರು ಕಾಲೇಜಿನ ಪ್ರಿನ್ಸಿಪಾಲರು ಮಾಜಿ ವೈಸ್‌ಛಾನ್ಸಲರು ಇದ್ದಾರಲ್ಲಾ.

ಶ್ರೀ ಜಿ. ಟಿ. ರಂಗಪ್ಪ.—ಈಗ ತಾವು ಹೊಸದಾಗಿ ವಿಶ್ವವಿದ್ಯಾನಿಲಯವನ್ನು ರಚಿಸುವ ಸಂದರ್ಭದಲ್ಲಿ, ಈಗಿರತಕ್ಕ ವಿಶ್ವವಿದ್ಯಾನಿಲಯಗಳಲ್ಲಿರುವ ನ್ಯೂನತೆಗಳನ್ನು ನೋಡಿ ಅದನ್ನು ಸರಿಪಡಿಸಿಕೊಂಡು ಎಲ್ಲಾ ಅನುಕೂಲಗಳನ್ನೂ ಮಾಡಿಕೊಡಬೇಕೆಂದು ನಾನು ಸೂಚನೆ ಮಾಡುತ್ತೇನೆ.

ಕೊನೆಯದಾಗಿ ಒಂದು ಮಾತು. ನಮ್ಮ ಹೊಸದುರ್ಗ ಟೌನಿನಲ್ಲಿ ಒಂದು ನರ್ಸರಿ ಸ್ಕೂಲಿದೆ, ಅದನ್ನು ಸ್ಥಾಪನೆಮಾಡಿ 5 ವರ್ಷಗಳಾದುವು. ಈ ಸ್ಕೂಲಿಗಾಗಿ ಒಂದು ಕಟ್ಟಡ ಕಟ್ಟಲು 5000 ರೂಪಾಯಿ

(ಶ್ರೀ ಜಿ. ಟಿ. ರಂಗಪ್ಪ)

ಗಳನ್ನು ಅಲ್ಲಿನ ಮುನಿಸಿಪಾಲಿಟಿಯುವರು ಕೊಟ್ಟು 5 ವರ್ಷಗಳಾದರೂ, ಸರ್ಕಾರದವರು ಈ ಬಗ್ಗೆ ಕೊಡಬೇಕಾದ ಗ್ರ್ಯಾಂಟನ್ನು ಕೊಡದೆ ಆ ಕಟ್ಟಡವನ್ನು ಇನ್ನೂ ಕಟ್ಟಲಾಗಿಲ್ಲ. ಸರ್ಕಾರದವರು ಇದಕ್ಕೆ ಗಮನಕೊಟ್ಟು ಬೇಗ ತಾವು ಕೊಡಬೇಕಾದ ಗ್ರ್ಯಾಂಟನ್ನು ಮಂಜೂರು ಮಾಡಬೇಕೆಂದು ಹೇಳುತ್ತೇನೆ. ಹಾಗೂ ಆದಷ್ಟು ಜಾಗ್ರತೆ ಸ್ಕೂಲು ಕಟ್ಟಡವನ್ನು ಕಟ್ಟಿಸಿಕೊಡಬೇಕೆಂದು ಹೇಳುತ್ತೇನೆ.

†Sri KADIDAL MANJAPPA (Sringeri).—Mr. Speaker, Sir, I wish to offer a few remarks on this Demand. I do not propose to take much time. Last year the Government of Mysore had taken two policy decisions. In one case we decided that text books should be nationalised and in the other case we decided that Mahatma Gandhi's Autobiography should be prescribed as a text-book. I do not know what steps have been taken to implement these decisions. With regard to the nationalisation of text-books, I would like to submit on this occasion that Government should invite eminent authors to write text-books. The present system is not at all satisfactory. We know of the pressure and the influence sometimes brought to bear upon the text-book committee by authors who are anxious to get their books prescribed as text-books. So I would request Government to take immediate steps to implement these decisions. I would like to suggest that there may be an Editorial Board consisting of eminent poets and authors to supervise the work of text-book writing and also to find out whether the books are really useful.

With regard to the second decision, I humbly submit that it is an urgent matter. I was all along pleading that Mahatma Gandhi's Autobiography was very useful in colleges and schools. Every nation should have a philosophy of life. Recently our beloved Prime Minister was pleased to say that the nation perishes without science and he also said that without spirituality the nation perishes. Mahatma Gandhi's Autobiography gives students an opportunity to understand the background of our freedom struggle. It also gives them a philosophy of life or the spirituality mentioned by our beloved Prime Minister. Mahatma Gandhi's Autobiography should be prescribed as a text-book in high schools and colleges.

With regard to text-books, I would like to offer one more suggestion. At present, there are different text-books in the different regions of the State. This has resulted in great hardship to the children of officials. I would like to suggest that there should be common text-books throughout the State. Another suggestion is that once a text book is prescribed after a good deal of thought, it should not be changed frequently. Nowadays, somehow text books are changed frequently. Education has become costly particularly to the poorer sections and the middle class. Therefore, I would like to suggest that the text-books once prescribed should be enforced at least for a period of five years.

Sri ANNA RAO GANAMUKHI.—I should like to say that this change was very necessary because uniform syllabus had been framed and in pursuance of that books had to be prescribed. Otherwise, we could have stuck to the old books.

Sri S. R. KANTHI.—In this connection, I may point out that from the First to the Seventh Standard text books are being made common and attempt is being made to have common text books throughout the State.

Sri KADIDAL MANJAPPA.—Sir, I have finished.

[Sri L. B. BIRJE (Khanapur).—Spoke in Marathi.]

4-30 P.M.

†ಶ್ರೀಮತಿ ಜಿ. ಸಿ. ಭಾಗೀರಥಮ್ಮ (ತುಮಕೂರು).—ಮಾನ್ಯ ಸಭಾಪತಿಗಳೇ, ೧೯೬೭-೬೮ನೆಯ ಸಾಲಿನ ವಿದ್ಯಾಖಾತೆಯ ಬೇಡಿಕೆಗಳನ್ನು ಅನುಮೋದಿಸುತ್ತ ನಾನು ಕೆಲವು ಸೂಚನೆಗಳನ್ನು ಸರ್ಕಾರದವರ ಮುಂದೆ ಇಡಲಿಚ್ಛಿಸುತ್ತೇನೆ. ಈ ಹಿಂದೆ ನಾನು ಜನರಲ್ ಬಡ್ಜೆಟ್ಟಿನ ಮೇಲೆ ಮಾತನಾಡಿದಾಗ ಈ ಸಾಲಿನಲ್ಲಿ ಸರ್ಕಾರದವರು ಕೈಗೊಂಡಿರತಕ್ಕ ಆ ಪ್ರಾಥಮಿಕ ಉಚಿತ ಕಡ್ಡಾಯದ ಶಿಕ್ಷಣವೇನಿದೆ—ಅದಕ್ಕೆ ಈ ಪ್ರಾಥಮಿಕ ವಿದ್ಯಾಭ್ಯಾಸವು ತಳಪಾಯವಿದ್ದಂತೆ ಎಂದು ಹೇಳಿದ್ದೆ. ಆದರೆ ಅಂಥಾ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಸರ್ಕಾರದ ಬೆಂಬಲ ಸರಿಯಾಗಿ ದೊರಕುತ್ತಿಲ್ಲ. ಈ ಹೊತ್ತು ಸರ್ಕಾರದವರು ಗ್ರಾಮಗಳಲ್ಲಿ ಕಟ್ಟತಕ್ಕ ಪ್ರಾಥಮಿಕ ಶಾಲಾ ಕಟ್ಟಡಗಳಿಗೆ ಒಂದು ಸಾವಿರ ರೂಪಾಯಿಗಳನ್ನು ಮಾತ್ರ ಕೊಡುತ್ತೇವೆ, ಇನ್ನುಳಿದ ಹಣವನ್ನು ಆಯಾ ಗ್ರಾಮಸ್ಥರೇ

ಹಾಕಿಕೊಂಡು ಆ ಕಟ್ಟಡಗಳನ್ನು ಕಟ್ಟಿಸಬೇಕೆಂದು ಹೇಳುತ್ತಿದ್ದಾರೆ. ಆದರೆ ಆ ಗ್ರಾಮಸ್ಥರಿಗೆ ಹಾಗೆ ಹಣವನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲ, ಈಗಾಗಲೇ ಹಳ್ಳಿಯ ಜನರು ಯಾವ ಒಂದು ರಸ್ತೆ ಮಾಡಲಿ, ಸೇತುವೆ ಮಾಡಲಿ, ಚರಂಡಿಯನ್ನು ಮಾಡಲಿ ಅವರ ಭಾಗದ ಹಣವನ್ನು ಕೊಡುತ್ತಿದ್ದಾರೆ. ಆದರೆ ಅವರಿಗೆ ಇನ್ನೂ ಹಣ ಕೊಡಬೇಕೆಂದರೆ ಅದು ಸಾಧ್ಯವಿಲ್ಲ. ಆ ಜನರಿಗೆ ಸರ್ಕಾರದವರು ಈ ಒಂದು ಭಾಗದಲ್ಲಾದರೂ ಸರಿಯಾಗಿ ಹಣವನ್ನೊದಗಿಸಬೇಕಾಗಿದೆ. ಆದುದರಿಂದ ಈ ಕಟ್ಟಡಗಳಿಗೆ ತಗಲುವ ವೆಚ್ಚದಲ್ಲಿ ಶೇಕಡ 60 ರಷ್ಟು ಹಣವನ್ನು ಅಂದರೆ 60 ಭಾಗದಷ್ಟು ಹಣವನ್ನು ಸರ್ಕಾರದವರು ಕೊಡಲೇಬೇಕೆಂದು ಅವರಲ್ಲಿ ನಾನು ಒತ್ತಾಯಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತೇನೆ.

ನಮ್ಮ ವಿದ್ಯಾಮಂತ್ರಿಗಳಾದ ಶ್ರೀಮಾನ್ ಕಂಠಿಯವರು ಈ ಹಿಂದೆ 2400 ರೂಪಾಯಿಗಳ ವರಮಾನದೊಳಗಿರತಕ್ಕವರ ಮಕ್ಕಳುಗಳಿಗೆಲ್ಲ ಕಾಲೇಜು ವಿದ್ಯಾಭ್ಯಾಸದವರೆಗೂ ಉಚಿತ ವಿದ್ಯಾಭ್ಯಾಸವನ್ನು ಕೊಡಲಾಗುತ್ತದೆಂದು ಹೇಳಿದರು. ಆದರೆ ಈ ವಿಚಾರವನ್ನು ಅವರು ಸಂಬಂಧಪಟ್ಟ ಅಧಿಕಾರಿಗಳಿಗೆಲ್ಲ ತಿಳಿಸಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ಈ ವಿಚಾರವನ್ನು ಆದಷ್ಟು ಜಾಗ್ರತೆ ಕಾರ್ಯರೂಪಕ್ಕೆ ತರಬೇಕೆಂದು ವಿದ್ಯಾಮಂತ್ರಿಗಳಲ್ಲಿ ಮನವಿಮಾಡಿಕೊಳ್ಳುತ್ತೇನೆ.

ಈಗಾಗಲೇ ಅನೇಕರು ನನ್ನ ಸ್ನೇಹಿತರು ವಿದ್ಯಾರ್ಥಿವೇತನಗಳು ಹಾಗೂ ಸ್ಕೂಲಿನಲ್ಲಿ ಕೊಡತಕ್ಕ ಫ್ರೀಷಿಪ್‌ಗಳು ವಿದ್ಯಾರ್ಥಿಗಳಿಗೆ ಸಕಾಲಕ್ಕೆ ದೊರೆಯುತ್ತಿಲ್ಲವೆಂಬ ಅಂಶವನ್ನು ತಿಳಿಸಿದ್ದಾರೆ. ಈ ಸ್ಕಾಲರ್‌ಷಿಪ್ ಮತ್ತು ಫ್ರೀಷಿಪ್‌ಗಳನ್ನು ಸ್ಕೂಲುಗಳ ಬಾಗಿಲು ತೆಗೆದ ಎರಡು ಮೂರು ತಿಂಗಳೊಳಗಾಗಿ ಸಕಾಲಕ್ಕೆ ಸರಿಯಾಗಿ ಹಂಚುವಂತೆ ವ್ಯವಸ್ಥೆ ಮಾಡಬೇಕೆಂದು ನಾನು ಒತ್ತಾಯಪೂರ್ವಕದಿಂದ ಕೇಳಿಕೊಳ್ಳುತ್ತೇನೆ.

ಇನ್ನು ಪಾಠಶಾಲೆಗಳಲ್ಲಿ ಕ್ರಮವಾಗಿ ಕಾಲಕ್ಕೆ ಸರಿಯಾಗಿ ಪಾಠಪ್ರವಚನಗಳು ನಡೆಯುತ್ತಿಲ್ಲ. ಹೈಸ್ಕೂಲು ಪಿ. ಯು. ಸಿ.ಗಳಲ್ಲಿ ವಿದ್ಯಾಮಟ್ಟ ಕಡಮೆಯಾಗುತ್ತಿದೆ. ವಿದ್ಯಾರ್ಥಿಗಳಿಗೆ ಉಪಾಧ್ಯಾಯರು ಕೊಡತಕ್ಕ ಎಕ್ಸರ್‌ಸೈಜುಗಳನ್ನು ಉಪಾಧ್ಯಾಯರು ಸರಿಯಾಗಿ ಕರೆಕ್ಟ್ ಮಾಡುತ್ತಿಲ್ಲ. ಹೀಗೆ ಅವರು ಮಾಡಿಕೊಂಡು ಶಾಲೆಗೆ ತರತಕ್ಕ ಎಕ್ಸರ್‌ಸೈಜುಗಳನ್ನು ಉಪಾಧ್ಯಾಯರು ಶ್ರದ್ಧೆಯಿಂದ ತಿದ್ದಿ ವಿದ್ಯಾರ್ಥಿಗಳಿಗೆ ಸರಿಯಾದ ತಿಳಿವಳಿಕೆಯನ್ನು ಕೊಡದೆ ಇರುವುದರಿಂದ ಪಬ್ಲಿಕ್ ಪರೀಕ್ಷೆಗಳಲ್ಲಿ ಹೆಚ್ಚು ಹುಡುಗರು ಉತ್ತೀರ್ಣರಾಗುತ್ತಿಲ್ಲ. ಈಗಲಾದರೂ ಅಧಿಕಾರಿಗಳು ಈ ವಿಚಾರದಲ್ಲಿ ಮುತುವರ್ಜಿ ವಹಿಸಿ ಇದನ್ನೆಲ್ಲ ಪರಿಶೀಲನೆ ಮಾಡಬೇಕು. ಈ ಕಾರಣಗಳಿಂದ ಸರಕಾರಿ ಸ್ಕೂಲುಗಳಲ್ಲಿ ರಿಜಲ್ಟು ಬಹಳ ಕಡಮೆ ಮಟ್ಟದಲ್ಲಿ ಬರುತ್ತಿದೆ. ಉಪಾಧ್ಯಾಯರುಗಳಲ್ಲಿ ಮುತವರ್ಜಿ ಕಡಿಮೆಯಾಗಿದೆ. ಆದರೆ ಪ್ರೈವೇಟ್ ಇನ್‌ಸ್ಟಿಟ್ಯೂಷನ್‌ಗಳಲ್ಲಿ ಮಾತ್ರ ರಿಜಲ್ಟ್ ಚೆನ್ನಾಗಿ ಬರುತ್ತಿದೆ. ಸರಕಾರಿ ಶಾಲೆಗಳಲ್ಲಿ ಚೆನ್ನಾಗಿ ಬಾರದೇ ಇರುವುದಕ್ಕೆ ಕಾರಣವೇನೆಂಬುದನ್ನು ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲನೆ ಮಾಡಬೇಕು ಮತ್ತು ವಿದ್ಯಾರ್ಥಿಗಳ ಎಕ್ಸರ್‌ಸೈಜ್‌ಗಳನ್ನು ಕರೆಕ್ಟ್ ಮಾಡುವ ಪದ್ಧತಿ ತಪ್ಪದೇ ನಡೆಯುತ್ತಾ ಹೋಗಬೇಕು. ಮತ್ತು ಪರೀಕ್ಷೆ ಫಲಿತಾಂಶ ಹೊರಬಿದ್ದ ಕೂಡಲೇ poor result ಬಂದಿರುವ ಸ್ಕೂಲುಗಳ ಬಗ್ಗೆ ತನಿಖೆಮಾಡಿ ಕ್ರಮತೆಗೆದುಕೊಂಡು ಮುಂದೆ ಅಂಥ poor result ಪುನಃ ಬಾರದ ಹಾಗೆ ಅಗತ್ಯವಾದ ಕ್ರಮಕೈಗೊಳ್ಳಬೇಕು ಎಂದು ಸರಕಾರಕ್ಕೆ ಮನವಿಮಾಡಿಕೊಳ್ಳುತ್ತೇನೆ.

Sri C. J. MUCKANNAPPA.—Sir, when was this coalition ministry formed ? My friend Sri Channabyre Gowda is sitting with the Minister. When did he take oath ?

(*Laughter*)

Mr. DEPUTY SPEAKER.—Order, order ......

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಕೇಂದ್ರ ಸರಕಾರದ ನೆರವಿನಿಂದ ಹಿಂದೀ ವಿದ್ಯಾಭ್ಯಾಸಕ್ಕೆ ಬರುತ್ತಿರುವ ಗ್ರಾಂಟನ್ನು ಸರ್ಕಾರದವರು ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ಕಾಲೇಜುಗಳಲ್ಲಿ ಶೇಕಡ 50 ಕಿಂತ ಹೆಚ್ಚು ಮಾರ್ಕ್ಸನ್ನು ಪಡೆದಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಡಲು ಇದ್ದ ಸೌಲಭ್ಯಗಳನ್ನು ನಮ್ಮ ಸರಕಾರ ಉಪಯೋಗಿಸಿಕೊಳ್ಳುತಿಲ್ಲ. ಇಲ್ಲಿ ಲೋಪ ನಡೆದಿರುವುದು ಕಾಲೇಜುಗಳಿಂದಲೋ ಅಥವಾ ಸರಕಾರದಿಂದಲೋ ಎಂಬುದನ್ನು ತನಿಖೆ ಮಾಡಿ ಮುಂದೆಯಾದರೂ ಈ ರೀತಿ ವಿದ್ಯಾರ್ಥಿಗಳಿಗೆ ಸೌಲಭ್ಯ ದೊರೆತಾಗ್ಗೆ ಅವು ನಿಷ್ಪ್ರಯೋಜನವಾಗದಂತೆ ನೋಡಿಕೊಳ್ಳಬೇಕು.

ಟೆಕ್ಸ್ಟ್ ಬುಕ್ ವಿಚಾರದಲ್ಲಿ ಈಗಾಗಲೇ ಅನೇಕ ಸದಸ್ಯರು ಹೇಳಿದ್ದಾರೆ. ಪಠ್ಯಪುಸ್ತಕಗಳನ್ನು ವರ್ಷೇ ವರ್ಷೇ ಬದಲಾಯಿಸಬಾರದು. ಹೀಗೆ ಮಾಡುವುದರಿಂದ ಸರಕಾರಕ್ಕೂ ನಷ್ಟ ಮತ್ತು ವಿದ್ಯಾರ್ಥಿಗಳಿಗೂ ನಷ್ಟ, ಐದು ವರ್ಷಕ್ಕೊಮ್ಮೆ ಬದಲಾಯಿಸುವುದು ಸೂಕ್ತ. ಪಠ್ಯಪುಸ್ತಕಗಳನ್ನು ಕೂಡ ಸಾಕಷ್ಟು ಪ್ರಮಾಣದಲ್ಲಿ ಅಚ್ಚು ಹಾಕಿಸುವುದು ಒಳ್ಳೆಯದು ಏಕೆಂದರೆ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳು ಸಕಾಲದಲ್ಲಿ ಒದಗುತ್ತಿಲ್ಲ.

ಹಿಂದಕ್ಕೆ ಸರ್ಕಾರವು ಸರಕಾರಿ ಅಧಿಕಾರಿಗಳು ಹಿಂದಿ ಭಾಷೆಯನ್ನು ಕಲಿಯಬೇಕೆಂಬ ಆಜ್ಞೆಮಾಡಿತ್ತು, ಅದು ಈಗ ಸಡಿಲವಾದಂತಿದೆ. ಅಧಿಕಾರಿಗಳಿಗೆ ಹಿಂದೀ ಭಾಷೆಯ ಮೇಲೆ ಅಭಿಮಾನವಿಲ್ಲದಂತಾಗಿದೆ. ಡಿಸ್ಟ್ರಿಕ್ಟ್ ಅಥವಾ ತಾಲ್ಲೂಕ್ ಲೆವೆಲ್‌ನಲ್ಲಿ ಹಿಂದೀ ಪ್ರಚಾರ ಕೈಕೊಂಡಿರುವ ಸಂಘ ಸಂಸ್ಥೆಗಳಿಗೆ ಸರಕಾರವು ನೆರವು ನೀಡಬೇಕು. ಹಿಂದೀ ಲೈಬ್ರರಿಗಳಿಗೆ ಪುಸ್ತಕಗಳನ್ನು ಒದಗಿಸಬೇಕು. ಹಿಂದೀ ವಿದ್ವತ್ ಪರೀಕ್ಷೆ ಮಾಡಿಕೊಳ್ಳುವುದಕ್ಕಾಗಿ ಕೇಂದ್ರ ಸರ್ಕಾರದ ನೆರವಿನಿಂದ 4 ವರ್ಷ ಟ್ರೇನಿಂಗನ್ನು ಕೊಡುತ್ತಿದ್ದಾರೆ. ಅದಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚಾಗುತ್ತಿದೆ. ಆದರೆ ಅಲ್ಲಿಂದ ಟ್ರೇನಿಂಗ್ ಪಡೆದು ಬಂದವರಿಗೆ ಕೆಲಸ ದೊರೆಯುತ್ತಿಲ್ಲ. ಅವರಲ್ಲಿ ಕೆಲವರನ್ನು ಮಿಡಲ್ ಸ್ಕೂಲ್ ಟೀಚರ್ಸ್ ಆಗಿ ತೆಗೆದುಕೊಂಡಿರುವುದು ಅನ್ಯಾಯ. ಅವರನ್ನು Part time worker ಆಗಿ ತೆಗೆದುಕೊಂಡು ೫೦-೬೦ ರೂಪಾಯಿ ಸಂಬಳ ಕೊಡುತ್ತಿದ್ದೀರಿ. ಅವರನ್ನು permanent teachers ಆಗಿ ನೇಮಿಸಬೇಕು. ಹಿಂದಿಯನ್ನು ಕಡ್ಡಾಯ ಶಿಕ್ಷಣವಾಗಿ ಮಾಡಿದ್ದೀರಿ. ಹಿಂದಿ ಶಿಕ್ಷಕರನ್ನು ಪರ್ಮನೆಂಟ್ ಮಾಡಿದರೆ ಹಿಂದಿ ಭಾಷೆಗೆ ಮಾನ್ಯತೆ ಮಾಡಿದಂತಾಗುತ್ತದೆ.

ಪಿ. ಎಸ್. ಸಿ.ಯಿಂದ ಎಲ್. ಎಸ್. ಮತ್ತು ಎಸ್. ಎಸ್. ಎಲ್. ಸಿ. ಆದವರನ್ನು enlist ಮಾಡಿ ಈಗ

(ಶ್ರೀಮತಿ ಜಿ. ಸಿ. ಭಾಗೀರಥಮ್ಮ)

ಅವರನ್ನು ವಾಪಸ್ ಕಳುಹಿಸುತ್ತಿರುವುದು ತಮ್ಮ ಗಮನಕ್ಕೂ ಬಂದಿರಬಹುದು ಬಹಳ ದಿವಸ ಕಾಲ ಸ್ಕೂಲುಗಳಲ್ಲಿ ಕೆಲಸ ಮಾಡಿ ಈಗ ಅವರನ್ನು ಮನೆಗೆ ಕಳುಹಿಸಲಾಗಿದೆ. ಅದರಲ್ಲಿ ಟ್ರೇಂಡ್ ಟೀಚರ್ ಇದ್ದಾರೆ, ಇದು ಅನ್ಯಾಯ. ಈ ಅನ್ಯಾಯವಾಗದಂತೆ ಸರಕಾರದವರು ಏನಾದರೂ ಏರ್ಪಾಡು ಮಾಡಬೇಕು ಎಂದು ಸರಕಾರಕ್ಕೆ ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಶೇಕಡ ೬೦ ರಷ್ಟು ಗ್ರಾಂಟ್ ಪಡಿಯುತ್ತಿರುವ ಕೆಲವು ಪ್ರೈವೇಟ್ ಇನ್‌ಸ್ಟಿಟ್ಯೂಷನ್‌ಗಳಲ್ಲಿ ಬಿ.ಎ., ಬಿ.ಎಸ್‌ಸಿ. ಪಾಸ್ ಮಾಡಿದ ಉಪಾಧ್ಯಾಯರುಗಳು ಕೆಲಸ ಮಾಡುತ್ತಿದ್ದಾರೆ. ಗೌರ್ನಮೆಂಟ್ ಸ್ಕೇಲಿಗೆ ಅಂದರೆ ೧೫೦ ರೂಪಾಯಿ ಸಂಬಳಕ್ಕೆ ರುಜು ಹಾಕಿಸಿಕೊಂಡು ಅದರಲ್ಲಿ ಅರ್ಧದಷ್ಟು ಮಾತ್ರ ಕೊಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ? ಈ ರೀತಿ ನಡೆಯುತ್ತಾ ಇದೆ. ಆದ್ದರಿಂದ ಇದನ್ನು ಪರಿಶೀಲಿಸಿ ಅಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳಿಗೆ ಸಂಬಳದ ವಿಷಯದಲ್ಲಿ ನ್ಯಾಯ ದೊರಕಿಸಿ ಕೊಡಬೇಕು ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ತಕ್ಕ ಕ್ರಮ ಕೈಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವವು ಯಶಸ್ವಿಯಾಗಬೇಕಾದರೆ ಅದು ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಅವಲಂಬಿಸಿದೆ. ದೇಶದ ಆಡಳಿತಗಾರರು ವಿದ್ಯಾಭ್ಯಾಸದ ಬಗ್ಗೆ ಸಭೆಗಳಲ್ಲಿ ಅನೇಕ ಸಂದರ್ಭಗಳಲ್ಲಿ ಬಹಳ ಆಸಕ್ತಿ ವಹಿಸುತ್ತಿದ್ದೇವೆಂದು ಹೇಳುತ್ತಿದ್ದರೂ ಕೂಡ ನಿಜವಾಗಿಯೂ ಇದಕ್ಕೆ ಎಷ್ಟು ಗಮನ ಕೊಡಬೇಕೋ ಅಷ್ಟು ಗಮನ ಕೊಡುತ್ತಿಲ್ಲವೆಂದು ಹೇಳುತ್ತೇನೆ. ಈ ಮೊದಲು ಮಾತನಾಡಿದ ಶ್ರೀ ಕಡಿದಾಳ್ ಮಂಜಪ್ಪನವರು ಶ್ರೀ ಅಣ್ಣಾರಾವ್ ಗಣಮುಖಿಯವರು ಒಂದು ಮಾತನ್ನು ಹೇಳಿದರು. ಹಿಂದಿನ ಸರಕಾರ ಕೆಲವು ತೀರ್ಮಾನ ಮಾಡಿರುವುದನ್ನು ಈ ಸರಕಾರ ಜಾರಿ ಮಾಡಲು ತಯಾರಿಲ್ಲ ಎಂದು ಕಾಣುತ್ತದೆ ಎಂದು ಅವರು ಹೇಳಿದರು. ಇದು ಸರಿಯಲ್ಲ, ಯಾವುದೇ ಒಂದು ಸರಕಾರ ಬಹುಕಾಲ ಭದ್ರವಾಗಿರಲು ಅವಕಾಶವಿಲ್ಲ. ಕಾಂಗ್ರೆಸ್ ಪಕ್ಷದಲ್ಲಿ ಮಂತ್ರಿಗಳ ಕಚ್ಚಾಟದಲ್ಲಿ ಒಂದು ಸರಕಾರ ಹೋಗಿ ಇನ್ನೊಂದು ಸರಕಾರ ಬಂದಿದೆ. ಹಿಂದಿನ ಸರಕಾರ ಮಾಡಿದ ಒಳ್ಳೇ ಕೆಲಸವನ್ನು ಮುಂದುವರಿಸದೆ ಈಗ ಹೊಸದಾಗಿ ಮತ್ತೊಂದನ್ನುಮಾಡುತ್ತಿದ್ದಾರೆ. ಕೆಟ್ಟದನ್ನು ಬದಲಿಸಬಹುದು. ಆದರೆ ಒಳ್ಳೆಯದನ್ನು ಬದಲಿಸುವುದು ಸರಿಯಲ್ಲ. ಹಿಂದಕ್ಕೆ ಶ್ರೀ ಕೆ. ಹನುಮಂತಯ್ಯನವರು ಮಂತ್ರಿಗಳಾಗಿದ್ದಾಗ ಸಂಸ್ಕೃತಿ ಪ್ರಚಾರ, ಹರಿಕಥೆ ಮುಂತಾದ ಕಾರ್ಯಕ್ರಮಗಳನ್ನು ವಿದ್ಯಾ ಇಲಾಖೆಯಲ್ಲಿ ಪ್ರಾರಂಭಿಸಿದರು. ಆದರೆ ಅವರು ಹೋದಮೇಲೆ ಅನೇಕ ಬದಲಾವಣೆಗಳಾಗಿ ಇವೆಲ್ಲವೂ ನಿಂತುಹೋದವು. ಈ ರೀತಿ ವಿದ್ಯಾಭ್ಯಾಸದಲ್ಲಿ ರಾಜಕೀಯ ಸೇರಿಸುವುದು ಮನಸ್ಸಿಗೆ ಬಂದಹಾಗೆ ಮಾಡುವುದು ಖಂಡಿತವಾಗಿಯೂ ದೇಶದ ಭವಿಷ್ಯಕ್ಕೆ ಸರಿಯಾದುದಲ್ಲವೆಂದು ಹೇಳುತ್ತೇನೆ. ಈ ದಿವಸ ನಮ್ಮ ರಾಷ್ಟ್ರದ ಪ್ರಜಾಪ್ರಭುತ್ವದ ಅಳಿವು ಉಳಿವು ಶಿಕ್ಷಣವನ್ನು ಅವಲಂಬಿಸಿದೆ ಎಂದು ಒತ್ತಿ ಹೇಳುತ್ತೇನೆ. ಈ ವರುಷ ವಿದ್ಯಾಭ್ಯಾಸಕ್ಕೆ ಸುಮಾರು ಹದಿನೆಂಟು ಕೋಟಿ ರೂಪಾಯಿ ಖರ್ಚಾಗಬಹುದೆಂದು ಅಂದಾಜಿದೆ. ಇಷ್ಟೇ ಅಲ್ಲದೆ ಇನ್ನೂ ಎರಡು ಮೂರು ಕೋಟಿ ರೂಪಾಯಿ ಖರ್ಚು ಮಾಡಬಹುದು. ಎನ್.ಇ.ಎಸ್. ರೆವೆನ್ಯೂ ಇಲಾಖೆಯಲ್ಲಿ ಏನಾದರೂ ಬದಲಾವಣೆ ಮಾಡಬಹುದು. ಆದರೆ ವಿದ್ಯಾಭ್ಯಾಸಕ್ಕೆ ಖರ್ಚು ಮಾಡತಕ್ಕಂಥ ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡುವುದಿಲ್ಲ, ಎಂದು ನಾನು ಭಾವಿಸಿದ್ದೇನೆ. ಈ ದಿವಸ ಶಿಕ್ಷಣ ವ್ಯವಸ್ಥೆಯಲ್ಲಿ ಒಂದು ಹೊಸ ಗಂಡಾಂತರ ತಲೆದೋರುತ್ತಿದೆ. ಹಿಂದಕ್ಕೆ ಸರಕಾರದವರೇ ಸ್ಕೂಲು ಕಾಲೇಜುಗಳನ್ನು ನಡೆಸುತ್ತಾ ಬಂದಿದ್ದಾರೆ. ಆದರೆ ಈಗ ಬೇರೆಯವರಿಗೆ, ಅಂದರೆ, ಖಾಸಗಿ ಸಂಸ್ಥೆಗಳಿಗೆ ಶಾಲೆ ಕಾಲೇಜುಗಳನ್ನು ನಡೆಸುವದಕ್ಕೆ ಹೆಚ್ಚು ಪ್ರಮಾಣದಲ್ಲಿ ಕೊಡುವದಾಗಿ ಸರಕಾರ ತೀರ್ಮಾನ ಮಾಡಿದೆ. ಇತ್ತೀಚೆಗೆ ಹೊಸ ಶಿಕ್ಷಣ ಮಂತ್ರಿಗಳು ಈ ವಿಚಾರವನ್ನು ತಿಳಿಸಿದ್ದಾರೆ ಮತ್ತು ಕೆಲವು ಧಾರ್ಮಿಕ ಸಂಸ್ಥೆಗಳಿಗೆ ಮಠಗಳಿಗೆ, ಜಾತೀಯ ಸಂಘಗಳಿಗೆ ವಿದ್ಯಾ ಸಂಸ್ಥೆಗಳನ್ನು ನಡೆಸಲು ಕೊಡುವುದಾಗಿ ಹೇಳಿದ್ದಾರೆ. ಈಗಾಗಲೇ ಇಂಥ ಜಾತೀಯ ಸಂಸ್ಥೆಗಳವರು 200 ಹೈಸ್ಕೂಲುಗಳನ್ನು ಪ್ರಾರಂಭ ಮಾಡಿದ್ದಾರೆಂದು ಕೇಳಿದ್ದೇನೆ. ಈ ರೀತಿ ಜಾತೀಯ ಸಂಸ್ಥೆಗಳನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತಾರೆ ಎಂಬುದು ನಿಜವಾಗಿಯೂ ವ್ಯಸನ ಪಡತಕ್ಕಂಥಾದ್ದು. ಕೇರಳ ರಾಜ್ಯದಲ್ಲಿ ವಿದ್ಯಾಭ್ಯಾಸದ ವಿಚಾರದಲ್ಲಿ ರಾಜಕೀಯ ಸೇರಿಸಿ ಹಿಂದಿನ ಸರಕಾರ ಮಾಡಿದ ವ್ಯವಸ್ಥೆಯನ್ನು ಪೂರ್ಣವಾಗಿ ಬದಲಿಸುವುದಕ್ಕೆ ಹೊಸ ಸರಕಾರ ಪ್ರಯತ್ನಿಸಿದ ಮೂಲಕ ಸರಕಾರ ಉರುಳಿಬೀಳುವ ಪರಿಸ್ಥಿತಿ ಬಂದಿತು. ಅದೇ ಪರಿಸ್ಥಿತಿ ನಮ್ಮ ದೇಶದಲ್ಲಿಯೂ ಬರುವುದು ಬಹಳ ದೂರವೇನಿಲ್ಲ ಎಂದು ಸರಕಾರಕ್ಕೆ ಎಚ್ಚರಿಕೆ ಕೊಡುತ್ತೇನೆ. ಒಂದು ನಿಯೋಜಿತವಾದ ಕಾರ್ಯಕ್ರಮವಿಲ್ಲದೆ ಕಡ್ಡಾಯ ಶಿಕ್ಷಣ ಪದ್ಧತಿಯು ಜಾರಿಗೆ ಬರುತ್ತಿದೆ. ಇದನ್ನು ವಿದ್ಯಾಸಚಿವರು ತಿಳಿಸಿದ್ದಾರೆ, ಗ್ರಾಮಗಳಲ್ಲಿ ಶಾಲಾ ಕಟ್ಟಡಗಳಿಲ್ಲ. ಆದರೆ ಬೆಂಗಳೂರು ನಗರದಲ್ಲಿ ಮಾತ್ರ ದೊಡ್ಡ ದೊಡ್ಡ ಕಟ್ಟಡಗಳನ್ನು ಕ್ವಾರ್ಟರ್ಸ್ ಕಟ್ಟಿಸಲು ಲಕ್ಷಾಂತರ ರೂಪಾಯಿ ಖರ್ಚು ಮಾಡಲು ಸರಕಾರ ತಯಾರಿದೆ. ಆದರೆ ಹಳ್ಳಿಯಲ್ಲಿ ಒಂದು ಸ್ಕೂಲು ಕಟ್ಟಡ ಕಟ್ಟಿಸಲು ಒಂದು ಸಾವಿರ ರೂಪಾಯಿ ಮಾತ್ರ ಕೊಡುತ್ತಾರೆ. ಒಂದು ಊರಿನಲ್ಲಿ 25 ಮನೆಗಳಿದ್ದು, ಅವರಿಗೆ ತಿನ್ನುವುದಕ್ಕೆ ಇಲ್ಲದೆ ಇರುವ ಕಡೆಗಳಲ್ಲಿ ಎರಡು ಸಾವಿರ ರೂಪಾಯಿ ಕೊಡಬೇಕು ಎಂದರೆ ಎಲ್ಲಿಂದ ತಂದು ಕೊಡುತ್ತಾರೆ? ಹಣ ಯಾರು ಕೊಡುತ್ತಾರೆಯೋ ಅಲ್ಲಿ ಮಾತ್ರ ಶಾಲೆಗಳನ್ನು ಕೊಡುವುದು ಸರ್ಕಾರದ ಧೋರಣೆಯೇ ಎಂದು ಕೇಳುತ್ತೇನೆ. ಹೀಗಾಗಬಾರದು. ವಿದ್ಯಾಭ್ಯಾಸವನ್ನು ಕೊಡುವ ವಿಚಾರದಲ್ಲಿ ಸರ್ಕಾರಕ್ಕೆ ತುಂಬ ಜವಾಬ್ದಾರಿ ಇದೆ. ಎಲ್ಲಕ್ಕಿಂತ ಮುಖ್ಯವಾಗಿ ದೇಶದಲ್ಲಿ ವ್ಯವಸ್ಥಿತವಾದ ಶಿಕ್ಷಣ ಪದ್ಧತಿ ಇರಬೇಕು. ನಮ್ಮ ದೇಶದ ಜನಾಂಗದ ಭವಿಷ್ಯ ಚೆನ್ನಾಗಿರಬೇಕಾದರೆ ವಿದ್ಯಾಭ್ಯಾಸದಲ್ಲಿರುವ ಡೋಲಾಯಮಾನ ನೀತಿಯನ್ನು ಅನುಸರಿಸುವುದನ್ನು ಬಿಟ್ಟು, ಅನಾವಶ್ಯಕವಾದ ದುಂದು ಖರ್ಚನ್ನು ಕಡಮೆ ಮಾಡಿ ಸ್ಕೂಲು ಕಟ್ಟಡಗಳು, ಮತ್ತು ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಬಾಬುಗಳಿಗೆ ಹೆಚ್ಚಿನ ಹಣವನ್ನೊದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮ ಸರ್ಕಾರ ಪ್ರಾಥಮಿಕ ಶಾಲೆಗಳನ್ನು ತಾಲ್ಲೂಕು ಬೋರ್ಡ್‌ಗಳಿಗೆ ಒಪ್ಪಿಸುತ್ತೇವೆಂದು ಹೇಳುತ್ತಿದ್ದಾರೆ. ಈಗ ನಮ್ಮ ಪ್ರಜಾಪ್ರಭುತ್ವ ನಡೆಯುತ್ತಿರುವ ಮಟ್ಟದಲ್ಲಿ, ನಮ್ಮ ರಾಜಕೀಯ ಪಕ್ಷಗಳು ಕೆಲಸ ನಡೆಸುತ್ತಿರುವ ರೀತಿಯಲ್ಲಿ ಪ್ರಾಥಮಿಕ ಶಾಲೆ

ಗಳನ್ನು ತಾಲ್ಲೂಕು ಬೋರ್ಡ್‌ಗಳಿಗೆ ಅಥವಾ ಪಂಚಾಯಿತಿಗಳಿಗೆ ಕೊಡುವುದರ ಪರಿಣಾಮವೇನು ಎಂಬುದನ್ನು ಯೋಚನೆ ಮಾಡಬೇಕು. ಮಂತ್ರಿಗಳಿಗೆ ಕೆಲಸ ಜಾಸ್ತಿಯಾಗಿ ತಮ್ಮ ಅಧಿಕಾರವನ್ನು ಸ್ಥಳೀಯ ಸಂಸ್ಥೆಗಳಿಗೆ ಒಪ್ಪಿಸುತ್ತಿದ್ದಾರೆಯೋ ಏನೋ ಅನ್ನಿಸುತ್ತದೆ. ಪಾರ್ಟಿ ಪಕ್ಷಗಳಿಂದ ಕೂಡಿರುವ ಸಂಸ್ಥೆಗಳಿಗೆ, ಬಹು ಮುಖ್ಯವಾದ, ತಜ್ಞರಾದವರು ನಡೆಸತಕ್ಕ ವಿದ್ಯಾಭ್ಯಾಸವನ್ನು ಒಪ್ಪಿಸಬೇಕೆಂದರೆ ಖಂಡಿತವಾಗಿಯೂ ದೇಶಕ್ಕೆ ಬಹಳ ಅನ್ಯಾಯ ಮಾಡಿದಂತೆ ಆಗುತ್ತದೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ವಿರೋಧ ಪಕ್ಷದವರು ಯಾವಾಗ ನೋಡಿದರೂ, ಕಾಂಗ್ರೆಸ್ ಪಕ್ಷ ಅಧಿಕಾರ ಬಿಟ್ಟುಕೊಡುವುದಕ್ಕೆ ತಯಾರಿಲ್ಲ, ಅಧಿಕಾರವನ್ನು ತಮ್ಮ ಕೈಯಲ್ಲೇ ಇಟ್ಟುಕೊಳ್ಳುವುದಕ್ಕೆ ಮನಸ್ಸು ಮಾಡುತ್ತಾರೆಂದು ಹೇಳುತ್ತಾರೆ. ಆದರೆ ಅಧಿಕಾರ ವಿಕೇಂದ್ರೀಕರಣ ಮಾಡಿದರೆ ಹೀಗೆಲ್ಲ ಹೇಳುತ್ತಾರೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಆಡಳಿತ ಪಕ್ಷದವರಲ್ಲಿ ಎಲ್ಲರಿಗೂ ಮಂತ್ರಿಗಳ ಕೆಲಸವನ್ನು ಕೊಡುವುದಕ್ಕಾಗುವುದಿಲ್ಲವೆಂದು ಸ್ವಲ್ಪ ಸ್ವಲ್ಪ ಅಧಿಕಾರವನ್ನು ಮಂಡಲ ಕಾಂಗ್ರೆಸ್ ಕಮಿಟಿಗಳಿಗೆ, ತಾಲ್ಲೂಕ್ ಬೋರ್ಡ್‌ಗಳಿಗೆ ಒಪ್ಪಿಸುವ ಯೋಜನೆಯಾಗಿದೆ ಎಂದು ನಮಗೆ ಅರ್ಥವಾಗುತ್ತದೆ. ಯಾವುದನ್ನು ಸ್ಥಳೀಯ ಸಂಸ್ಥೆಗಳಿಗೆ ವಹಿಸ ಬಹುದು, ಯಾವುದನ್ನು ವಹಿಸಬಾರದು ಎನ್ನುವುದನ್ನು ಯೋಚನೆ ಮಾಡುವುದಿಲ್ಲ. ವಿದ್ಯಾಭ್ಯಾಸ, ವೈದ್ಯಕೀಯ ಇವುಗಳ ಜೊತೆಗೆ ಹಣಕಾಸಿನ ಇಲಾಖೆಯನ್ನೂ ಕೊಡಿ.

ಇನ್ನೊಂದು ಮುಖ್ಯವಾದ ವಿಷಯವೇನೆಂದರೆ, ವಿದ್ಯಾ ಇಲಾಖೆಯಲ್ಲಿ ವರ್ಗ ಮಾಡುವ ಪದ್ಧತಿ ಬಹಳ ಶೋಚನೀಯವಾದುದು. ಇದಕ್ಕೆ ಒಂದು ನೀತಿ ನಿಯಮವಿಲ್ಲ. ಮಂಡಲ ಕಾಂಗ್ರೆಸ್ ಸಮಿತಿಯ ಸದಸ್ಯರು ಬಂದು ತಮಗೆಬೇಕಾದವರ ವಿಚಾರದಲ್ಲಿ ಹೇಳಿದರೆ ಆರು ವರ್ಷಗಳಾದರೂ ಒಂದು ಕಡೆ ಇಟ್ಟಿರುತ್ತಾರೆ. ಬೇರೆಯವರಾದರೆ ಆರು ತಿಂಗಳಿಗೇ ವರ್ಗ ಮಾಡುತ್ತಾರೆ. ಒಂದು ಕಡೆಗೆ ವರ್ಗ ಮಾಡಿದ ಮೇಲೆ ಮೂರು ವರ್ಷಗಳಾಗುವವರೆಗೂ ಬೇರೆ ಕಡೆಗೆ ವರ್ಗ ಮಾಡುವ ಪಾಪಕ್ಕೇ ಹೋಗಬಾರದು ಎಂದು ನಾನು ಮಾನ್ಯ ವಿದ್ಯಾ ಮಂತ್ರಿಗಳಿಗೂ ಉಪ ಮಂತ್ರಿಗಳಿಗೂ ಹೇಳುತ್ತೇನೆ. ಮೂರು ವರ್ಷಗಳಾದ ಮೇಲೆ ಯಾರು ಬಂದು ಹೇಳಿದರೂ ಅವರ ಮಾತಿಗೆ ಕಿವಿಗೊಡದೆ ಬೇರೆ ಕಡೆಗೆ ವರ್ಗಮಾಡಿ. ಪಟ್ಟಣ ಪ್ರದೇಶಗಳಲ್ಲಿ 20 ವರ್ಷಗಳ ಕಾಲ ಒಂದೇ ಕಡೆ ಕೆಲಸ ಮಾಡುತ್ತಿರುವವರಿದ್ದಾರೆ. ಗ್ರಾಮಾಂತರಗಳಲ್ಲಿರುವವರು ಪಟ್ಟಣಗಳಿಗೆ ಬರಬೇಕು ಎಂದು ಪ್ರಯತ್ನ ಮಾಡಲೂ ಸಹ ಸಾಧ್ಯವಿಲ್ಲದ ಪರಿಸ್ಥಿತಿ ಇದೆ. ತಮಗೆ ಬೇಕಾದವರಾದರೆ ಎಲ್ಲಿಗೆ ವರ್ಗವಾದರೂ ಅಧಿಕಾರಿಗಳನ್ನು ನೋಡಿ ತಮಗೆ ಬೇಕಾದ ಹಾಗೆ ಮನಸ್ವೇಚ್ಛೆ ವರ್ಗ ಮಾಡಿಸುತ್ತಾರೆ. ಇದರಿಂದ ಬಹಳ ಅನ್ಯಾಯವಾಗುತ್ತದೆ. ಈ ರೀತಿ ಅನ್ಯಾಯಗಳಾಗದಂತೆ ಕಾರ್ಯಕ್ರಮ ತೆಗೆದು ಕೊಳ್ಳಬೇಕೆಂದು ಹೇಳುತ್ತೇನೆ.

ವಿಶ್ವವಿದ್ಯಾನಿಲಯದ ಬಗ್ಗೆ ಒಂದು ಮಾತು. ನಮ್ಮ ಮಾನ್ಯ ಮಂತ್ರಿಗಳಾದ ಶ್ರೀ ಕಂಠಿಯವರು ಅಪ್ಪಣೆ ಕೊಡಿಸಿದರು. ನಾವು ಉತ್ತರ ಕರ್ಣಾಟಕದವರು, ಬೇರೆ ಬೇರೆ ಭಾಗದವರು ಎನ್ನುವ ಸಣ್ಣ ಭಾವನೆ ಬರಬಾರದು. ಇಡೀ ಕರ್ಣಾಟಕ ದೇಶವೆಲ್ಲ ಒಂದೇ ಎನ್ನುವ ದೊಡ್ಡ ಭಾವನೆ ಬೆಳೆಸಬೇಕು ಎಂದು ಹೇಳಿದರು. ನಮ್ಮಲ್ಲಿ ಎರಡು ವಿಶ್ವ ವಿದ್ಯಾನಿಲಯಗಳಿವೆ. ಇವಕ್ಕೆ ಎರಡು ಪ್ರತ್ಯೇಕ ಕಾನೂನುಗಳಿವೆ. ಹೀಗೆ ಒಂದೇ ರಾಜ್ಯದಲ್ಲಿ ಎರಡು ರೀತಿಯಾಗಿ ಏಕೆ ಇರಬೇಕು ಎಂದು ಕೇಳುತ್ತೇನೆ. ಜನಗಳ ಮನಸ್ಸಿನಲ್ಲಿ ಏನು ಅನುಮಾನವಿದೆ ಎಂದರೆ, ಯಾವುದೋ ಒಂದು ಜಾತಿಗೆ ಅನುಕೂಲ ಮಾಡಲು ಪ್ರತ್ಯೇಕ ವಿಶ್ವ ವಿದ್ಯಾನಿಲಯವಿದೆ, ಆದ್ದರಿಂದ ಎರಡು ವಿಶ್ವ ವಿದ್ಯಾನಿಲಯಗಳನ್ನು ಸರ್ಕಾರ ಪಡೆದಿದೆ ಎಂದು ಹೇಳುತ್ತಾರೆ. ಇಂಥ ಅನುಮಾನಕ್ಕೆ ಅಸ್ಪದಕೊಡದೆ ಇರುವ ರೀತಿಯಲ್ಲಿ ಕೆಲಸ ಕಾರ್ಯಗಳು ನಡೆಯಬೇಕು. ಮೊದಲು ವಿಶ್ವ ವಿದ್ಯಾನಿಲಯಗಳಲ್ಲಿ emotional integration ಆಗಬೇಕು. ಇದಕ್ಕಾಗಿ ಎರಡು ವಿಶ್ವ ವಿದ್ಯಾನಿಲಯಗಳಿಗೂ ಅನ್ವಯಿಸುವಂತೆ ಒಂದೇ ಕಾನೂನು ಇರುವಂಥ ವ್ಯವಸ್ಥೆ ಆಗಬೇಕೆಂದು ಕೇಳಿಕೊಳ್ಳುತ್ತೇನೆ.

ಎರಡು ಸಾವಿರ ಉಪಾಧ್ಯಾಯರನ್ನು ನೇಮಿಸುವುದಕ್ಕೆ ವ್ಯವಸ್ಥೆ ಮಾಡಿದ್ದೇವೆಂದು ಹೇಳಿದ್ದಾರೆ. ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರಬೇಕಾದರೆ 20 ಸಾವಿರ ಉಪಾಧ್ಯಾಯರು ಹೆಚ್ಚಿಗೆ ಬೇಕು ಎಂದು ಹೇಳುತ್ತಾರೆ. ಹೋದ ವರ್ಷ ಐದು ಸಾವಿರ ಜನರನ್ನು ತೆಗೆದುಕೊಂಡಿದ್ದಾರೆ, ಈ ವರ್ಷ ತೆಗೆದುಕೊಳ್ಳುವ ಎರಡು ಸಾವಿರ ಜನರನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಇನ್ನೂ 13 ಸಾವಿರ ಜನ ಉಪಾಧ್ಯಾಯರು ನಮಗೆಬೇಕು. 13 ಸಾವಿರ ಉಪಾಧ್ಯಾಯರು ಇನ್ನೂ ಬೇಕಾಗಿರುವಾಗ ಕಡ್ಡಾಯ ಶಿಕ್ಷಣವನ್ನು ಹೇಗೆ ಜಾರಿಗೆ ತರುತ್ತಾರೆಂದು ಕೇಳುತ್ತೇನೆ. ಉಪಾಧ್ಯಾಯರಾಗಲು ಎಸ್. ಎಸ್. ಎಲ್. ಸಿ. ಪಾಸ್ ಮಾಡಿದ ಮಾತ್ರಕ್ಕೇ ಸಾಲದು. ಯಾವ ತರಬೇತಿಯೂ ಇಲ್ಲದವರನ್ನು ಉಪಾಧ್ಯಾಯರಾಗಿ ನೇಮಕ ಮಾಡುವುದರಿಂದ ಶಿಕ್ಷಣದ ಮಟ್ಟ ಕಡಮೆಯಾಗುತ್ತದೆ. ಇವರಿಗೆ ಟ್ರೈನಿಂಗ್‌ಕೊಡಲು ಹೆಚ್ಚಿಗೆ training centres ಸಾಕಷ್ಟು ಕಡೆಗಳಲ್ಲಿ ತೆರೆಯಬೇಕು. ಟ್ರೈನಿಂಗ್ ಪಡೆದಂಥ ಉಪಾಧ್ಯಾಯರನ್ನೇ ಪ್ರಾಥಮಿಕ ಶಾಲೆಗಳಲ್ಲಿ ನೇಮಿಸುವುದರಿಂದ ಬಹಳ ಒಳ್ಳೆಯದಾಗುತ್ತದೆಂದು ಸಲಹೆ ಮಾಡಲಿಕ್ಕೆ ಇಷ್ಟಪಡುತ್ತೇನೆ.

ಸ್ಕಾಲರ್‌ಷಿಪ್‌ಗಳ ವಿಷಯದಲ್ಲಿ ಒಂದು ಮಾತನ್ನು ಹೇಳಬೇಕು. ಒಂದು ತಾಲ್ಲೂಕಿನಲ್ಲಿ 60-70 ಸಾವಿರ ಜನರ ವೋಟುಪಡೆದು ಆರಿಸಿಬಂದಿರುವಂಥ ಅಸೆಂಬ್ಲಿಯ ಸದಸ್ಯರಿಗೆ ಸ್ಕಾಲರ್‌ಷಿಪ್ ಕಮಿಟಿಗಳಲ್ಲಿ ಒಂದು ಸ್ಥಾನ ಕೊಡುವುದಕ್ಕೆ ವಿದ್ಯಾ ಇಲಾಖೆಯವರು ತಯಾರಿಲ್ಲ. ಇಂಥವರನ್ನು ಕಮಿಟಿಗಳಿಗೆ ನೇಮಿಸಬೇಕು ಎಂದು ಸಲಹೆಕೊಟ್ಟರೆ ಅದಕ್ಕೆ ಮನ್ನಣೆ ಇಲ್ಲ. ಯಾರೋ ಮಂಡಲ ಕಾಂಗ್ರೆಸ್ ಸೆಕ್ರೆಟರಿ ಬಂದು ಹೇಳಿದರೆ ಅವರಿಗೆ ಬೇಕಾದವರನ್ನು ಮಾತ್ರ ಸ್ಕಾಲರ್‌ಷಿಪ್ ಕಮಿಟಿಗಳಿಗೆ ನೇಮಿಸುತ್ತಾರೆ. ಸ್ಕಾಲರ್‌ಷಿಪ್ ಕಮಿಟಿಗಳನ್ನು ಕಾಂಗ್ರೆಸ್‌ನವರು ತಮ್ಮ ರಾಜಕೀಯಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಯಾರು ಚುನಾವಣೆಗಳಲ್ಲಿ ತಮ್ಮ ಪರವಾಗಿ ಕೆಲಸ ಮಾಡಲಿಲ್ಲವೋ ಅವರಿಗೆ ಸ್ಕಾಲರ್‌ಷಿಪ್ ಕೊಡಿಸುವುದಿಲ್ಲವೆಂದು ಹೇಳುತ್ತಿದ್ದಾರೆ. ಆ ರೀತಿ ಅನ್ಯಾಯವಾಗಬಾರದು. ಸ್ಕಾಲರ್‌ಷಿಪ್ ಕಮಿಟಿಗಳು ಕಾಂಗ್ರೆಸ್ ಕಮಿಟಿಗಳಾಗಬಾರದು. ವಿರೋಧ ಪಕ್ಷದವರಿಗೆ, ಮತ್ತು ಇತರರಿಗೆ ಕೂಡ ಈ ಕಮಿಟಿಗಳಲ್ಲಿ ಸ್ಥಾನವಿರಬೇಕು. ನಿಜವಾಗಿಯೂ ಯಾರು ಅರ್ಹರಾಗಿರುತ್ತಾರೆಯೋ ಅಂಥವರಿಗೆ ಮಾತ್ರ ಸ್ಕಾಲರ್‌ಷಿಪ್ ಕೊಡುವಂಥ ನ್ಯಾಯವಾದ ಜನರು ಈ ಕಮಿಟಿಗಳಲ್ಲಿರುವಂತೆ ನೇಮಿಸಬೇಕು ಎಂದು ಹೇಳುತ್ತೇನೆ.

ನಾವು ಮತ್ತು ನಮ್ಮ ಸ್ನೇಹಿತರು ಎಷ್ಟೋ ಸಲಹೆಗಳನ್ನುಕೊಟ್ಟಿದ್ದೇವೆ, ಆದರೂ ನಮಗೆ ಬಹುಮತವಿದೆ,

(ಶ್ರೀ ಪಿ. ವೆಂಕಟಗಿರಿಯಪ್ಪ)

ನಾವು ಒಪ್ಪಿದರೆ ಆಯಿತು ಎಂದು ತಿಳಿದುಕೊಂಡರೆ ಅದರಿಂದ ಸಹಾಯವಾಗಲಾರದು. ಹಿಂದಿನ ಸಭೆಯಲ್ಲಿ ಆಡಳಿತ ಪಕ್ಷದವರು ಎಷ್ಟು ಜನರಿದ್ದರು, ಈ ವರ್ಷ ಎಷ್ಟು ಜನರಿದ್ದಾರೆ ಎನ್ನುವುದು ಗೊತ್ತಿದೆ. ಅವರ ಸ್ಥಾನದಲ್ಲಿ ವಿರೋಧಪಕ್ಷದ ಜನ ಕೂಡ ಕುಳಿತುಕೊಳ್ಳುವ ಕಾಲ ಬರಬಹುದು. ಆದುದರಿಂದ ವಿರೋಧಪಕ್ಷದವರ ನ್ಯಾಯವಾದ ಸಲಹೆಗಳಿಗೆ ತೀವ್ರ ಗಮನ ಕೊಡಬೇಕು. ದೇಶದ ಭವಿಷ್ಯ ಉತ್ತಮವಾಗಬೇಕಾಗಿದ್ದರೆ, ಮಹಾತ್ಮ ಗಾಂಧಿಯವರ ಹೆಸರು ಹೇಳಿ ರಾಜ್ಯ ಭಾರ ಮಾಡುವ ಹಾಗಿದ್ದರೆ, ವಿರೋಧಪಕ್ಷದವರ ನ್ಯಾಯವಾದ ಸಲಹೆಗಳಿಗೆ ಕೂಡ ತೀವ್ರಗಮನಕೊಟ್ಟು, ಅದರಂತೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

5-00 P.M.

Sri GANJI VEERAPPA (Harihar).—Mr. Speaker, Sir, I shall confine my speech to Universities. As you are aware, there are two Universities functioning in the State of Mysore. One is the Mysore University and the other is the Karnatak University. Looking at the announcement made by the Education Minister today, there is likely to be another University called the Bangalore University to be established at Bangalore. If that is the idea of Government, it is very welcome.

Sri K. LAKKAPPA (Hebbur).–Sir, my friend is speaking on a University which is going to be established. There is no Demand with respect to that and so my friend cannot raise that point here on this Demand.

Mr. DEPUTY SPEAKER.—It does not mean that no new ideas cannot be brought in.

Sri GANJI VEERAPPA.—In regard to these two Universities a high level committee called the Laxmana Swamy Mudaliar Committee had been appointed and that Committee had made some very important recommendations for bringing about uniformity in the two Universities. I wish Government had devoted their attention to the implementation of the several recommendations of this Committee. One of the recommendations was to have an Advisory Committee to advise the Director of Collegiate Education in the matter of opening new colleges, in the matter of opening new courses of studies and in the matter of affiliations. You are aware that it is the Director of Collegiate Education who is the powerful man today because there are several colleges coming under his control. So this recommendation of the Committee to have an advisory Committee to advise the Director of Collegiate Education is a very important one and I wish Government had taken action on this recommendation. I have all respect for the present Director, but I have heard several criticisms made and so in a matter like this, it is better that this recommendation of the Committee is carried out.

Then another important recommendation of the Committee was that two important colleges, namely, the Central College and the Maharaja's College should be with the University. I do not know why the Government did not implement this recommendation. They have attached the Central College offering Post-graduate studies to Government. I wish the Central College had gone to the University. By being attached to Government the efficiency and progress of these colleges suffer. The University Grants Commission gives very huge amounts for post-graduate studies, but being attached to Government, this grant is not available to this college and this is a very heavy burden on the Government.

Sri ANNA RAO GANAMUKHI.—Post graduate courses are the monopoly of Universities.

Sri GANJI VEERAPPA.—Yes. This was the practice previously.

Sri ANNA RAO GANAMUKHI.—In Madras and Bombay it is not like that.

Sri GANJI VEERAPPA.—I can quote a few instances.

Sri H. R. KESHAVA MURTHY (Gandasi).—Is it the opinion of the Hon'ble Member that this leads to inefficiency ?

Sri GANJI VEERAPPA.—I can under stand the opposition of the Hon'ble Members on the other side. No Government can run it in a perfect manner. The difference between me and my friends opposite is that I make constructive criticism whereas they do not offer constructive criticisms.

Sri C. J. MUCKANNAPPA.—It is very unfair on the part of the Member to say that he alone makes constructive criticism and that we make destructive criticism.

Sri GANJI VEERAPPA.—They are meant to oppose whatever comes before them and they are doing their job very well.

Sri C. J. MUCKANNAPPA.—Sir, how do you allow such aspersions on the Opposition ?

Mr. DEPUTY SPEAKER.—No interruptions, please.

Sri V. S. PATIL.—Sir, in this House every member has got a right to speak and express his views, but no member can use his right with a view to decrying or damaging the reputation either of a party or of a member. The learned member Sri Ganji Veerappa has just said that the Hon'ble Members occupying the Opposition benches do not make any constructive criticisms but only destructive criticisms. This is derogatory to the whole of the Opposition and I feel that the Chair will ask him to withdraw his words or in the alternative expunge those words from the record.

Mr. DEPUTY SPEAKER.—It is only a fair criticism. This side makes criticism of the other side and *vice versa* and there is nothing irregular in it.

Sri GANJI VEERAPPA.—I did not mean anything against the Hon'ble Members opposite. I only said that any criticism made here must be constructive.

Coming back to the question of uniformity, there is no uniformity in the constitution of the several bodies of the two Universities. The constitution of the Senate, Syndicate and the Academic Council of the Mysore University is different from the constitution of those bodies of the Karnatak University. To point out an instance, the powers of the Syndicate of the Karnatak University are much more than those of the Syndicate of the Mysore University. Further, the Vice-Chancellor of the Karnatak University is an elected member whereas the Vice-Chancellor of the Mysore University is nominated by Government. There must be some sort of uniformity in this respect in the same State. In fact, the Lakshmana Swamy Mudaliar Committee has made the recommendation that so far as the appointment of the Vice-Chancellor is concerned, the Senate must give a panel of three names from which the Chancellor should select one and make the appointment. I think it is very healthy because the Senate which is the supreme body of the University shou d have powers in the matter of appointment of the Vice-Chancellor. Some of these important recommendations made by the Lakshmanaswamy Mudaliar Committee, I think, must be given effect to as early as possible.

Recently, the Government have passed an order which has met with criticism at the hands of several persons. In fact, I am one of those who were pained when that order was passed demoting 111 persons. It is a bad number. 111 persons have been demoted from the post of Lecturer to the post of Tutor. I wish to bring to the notice of the House that all these persons who were appointed as temporary Lecturers possessed the minimum qualifications required for Lecturers' posts, *viz.* a Master's Degree. I have heard that all those who were appointed by the Director of Collegiate Education prior to a certain date have been demoted while those who were appointed by the University prior to the Director of Collegiate Education taking over the administration of the colleges have been retained as Lecturers. The basis for their appointment by the University is the same as the basis on which they were appointed by theDirector of Collegiate Education. Therefore, I do not see any sense or reason to justify this order. I am pained to use these words. In fact, the argument advanced is that efficiency has suffered and that this demotion is going to restore efficiency. On the other hand, do you think that these 111 persons who hereafter will be Tutors will put their heart and soul into their work ? On the other hand, I feel that efficiency will suffer. The

(SRI GANJI VEERAPPA)

argument is that all these people have joined service. What else can they do if the appointing authority says, "You fellows, if you do not join......".

Sri S. SIVAPPA.—Which is the Government that has done that?

Sri GANJI VEERAPPA.—Today it is my party Government. The sooner the Government revises this decision and restores all those people who have been demoted as Tutors, the better. Let them not stand on prestige. After all, anybody is apt to commit mistakes. Perhaps, there was wrong advice given to Government. I therefore appeal to the Government that the injustice done to these 111 persons must be remedied. Otherwise, I am sure the very argument that they have advanced for this decision *viz.* improvement of efficiency will go against them and efficiency will be affected. To maintain efficiency they must revise their decision. I do not want to go further than that.

Then, I wish to make a few suggestions with regard to the Law College. The strength in the Law College is increasing and there are thousands and odd applicants now whereas they have to select only 500 candidates. But there is no building worth the name. Of course, our friends have seen the Law College buildings. The legal profession and the Law Courts are the last resort of many people. If they do not get seats elsewhere, they go there. If they do not get proper facilities like buildings, staff, etc., what should they do? It is a long time since the demand for buildings is before the Government and I suggest that Government should provide a decent building to house the Law College. With regard to staff, I learn that all those people who have worked for eight to ten years are all temporary. I do not know why their term is being renewed every year. The age limit for an Assistant Professor is forty five. Suppose a man has joined as an Assistant Professor at the age of forty and if his term is renewed year after year and if he exceedes the age limit of 45, he will lose his job. This rule must be relaxed and all the people who are temporary, if they are found fit and efficient, should be continued for a full term instead of being dealt with in this piecemeal fashion.

One reads in the Press that some new Engineering Colleges are being started. I am glad that some people have come forward for starting these colleges because in all the existing colleges there is great rush and they are not able to give seats to all the applicants. Therefore, if private organisations come forward with funds, efficient staff and other facilities, I appeal to Government not to stand in the way of their starting colleges. Let them write to the Centre and see that permission is given for starting these colleges

Sri C. J. MUCKANNAPPA.—Some of these private colleges are accepting donations for giving seats?

Sri GANJI VEERAPPA.—I have nothing to say about the method of giving seats. I do not advocate that they should accept donations. I will be very happy if they give seats without accepting donations so that the poor students will be able to get seats. What I wish to suggest is this: let them encourage the starting of Engineering and Medical Colleges on proper lines because we want more engineers, doctors and other technical personnel.

Sri ANNA RAO GANAMUKHI.—As far as Government is concerned, it does not come in to the picture at all because affiliation is named by the University. If they do not want grant, no permission of Government is required.

Sri GANJI VEERAPPA.—Sri Annarao knows that unless the State Government, the University and the Central Government agree, no college can be started. Thank you, Sir.

Mr. DEPUTY SPEAKER.—The House will now rise and re-assemble tomorrow at one o'clock.

The House adjourned at Twenty Minutes past Five of the Clock to meet again at One of the Clock on Wednesday, the 18th July 1962.

WD 8245—GPB—900— 11-2-1963